R6634xL
33NA

CC-0. Jangamwadi Math Collection. Digitized by eGangotri

R6634x1 334
35NA
Namalinganusasane

CC-0. Jangamwadi Math Collection. Digitized by eGangotri

R6634xc1
33NA

334

SHRI JAGADGURU VISHWARADHYA JNANAMANDIR
(LIBRARY)
JANGAMAWADIMATH, VARANASI

❁ ❁ ❁ ❁ ❁

Please return this volume on or before the date last stamped
Overdue volume will be charged 1/- per day.

R66:34x1
33NA

SRI JAGADGURU VISHWARADHYA
JNANA SIMHASAN JNANAMANDIR
LIBRARY.
Jangamwadi Math, VARANASI.
Acc No. 334

CC-0. Jangamwadi Math Collection. Digitized by eGangotri

ಉಪೋದ್ಘಾತಪ್ರಕರಣವು

...ನೆಂಬ ಬೌದ್ಧ ಸಾಧಾರಣವಾದ ಹೆಸರುಳ್ಳವನಾಗಿರುವದರಿಂದ ... ಬೌದ್ಧಮತ ಪ್ರವಿಷ್ಟನಾಗಿರಬಹುದೆಂದು ತೋರುತ್ತೆ. ಆ ...ಂಥವು ರಚಿಸಲ್ಪಟ್ಟ ಕಾಲದಲ್ಲಿ ಪ್ರಾಬಲ್ಯದೊಡನೆ ಆಳುವವ ... ಚಾರ್ವಾಕಾದಿಗಳ ತೃಪ್ತಿಗೋಸ್ಕರವಾಗಿ ಬ್ರಾಹ್ಮಣರೊ ... ತಸೀಸರಿ ಗ್ರಂಥವಂ ನಿರ್ಮಿಸಿದನೆಂದು ಕೆಲವರು ಹೇಳುವ ...ದಾಗ್ಯೂ ಉಭಯಥಾಪಿ ಗ್ರಂಥಕರ್ತೃವಿಗೆ ಸರ್ವಸಾಧಾರಣವಾ ...ಳವಂ ಪ್ರಕಟಿಸುವದೇ ಉದ್ದೇಶ್ಯವಾಯಿತು ಆದರಿಂದಲೇ ಈ ...ೋಶವು ಸರ್ವಜನ ಪರಿಗ್ರಾಹ್ಯವಾಗಿದೆ ಮತ್ತು ಇದರೊಳಗಿತ ...ಂದಾಭಿಪ್ರಾಯವಿಲ್ಲದೆ ಆಯಾ ಪ್ರಕರಣಂಗಳಲ್ಲಿ ತತ್ತದಭಿಮತ ...ಂ ಬಿಡದೆ ಶ್ರುತಿ ಸ್ಮೃತಿ ಪುರಾಣೇತಿಹಾಸಾದಿ ಪ್ರಸಿದ್ಧವಾದ ...ಗಳಂ ಬೋಧಿಸುವ ವ್ಯಾಕರಣಾದಿ ಶಾಸ್ತ್ರಶಿಕ್ಷಿತರಾಗಿಯೂ, ...ೇಶ ಸಂಗ್ರಹರೂಪವಾಗಿಯೂ. ವ್ಯುತ್ಪತ್ತಿಗಳಿಗತ್ಯಂತೋಪ ವಾಗಿಯೂ ಇರುವದರಿಂದ ಪ್ರಯೋಜಕವಾದ ಈ ಗ್ರಂಥವ ...ಸ್ತಿಕರಾದ ನಾವೆಲ್ಲರು ಪರಿಗ್ರಹಿಸಬಹುದಾಯಿತು. ಮತ್ತು (ಅ ...) ಎಂಬುವಲ್ಲಿ ಅಕಾರಕ್ಕೆ ವಿಷ್ಣುವು, ಕ್ಷಯಶಬ್ದಕ್ಕೆ ವಾಸಸ್ಥಾನ ...ಣಾಃ) ಎಂಬುವದಕ್ಕೆ ರತ್ನಾಕರತ್ವಾದಿಗಳು. (ಶ್ರಿಯ್ಯಾ) ಎಂ ...ಕ್ಕೆ ಲಕ್ಷ್ಮೀ. (ಅಮೃತಾಯ) ಎಂಬುವದಕ್ಕೆ ಸುಧೆ, ಈ ಮೇರೆ ...ಂ ಕಲ್ಪಿಸಿದರೆ, ಶ್ಲೋಕವು ಕ್ಷೀರಾಬ್ಧಿ ಪರವಾಗಿಯೂ ಅನ್ವಯಿ ...ತೆ. ಹೀಗೆಯೇ ವ್ಯಾಕರಣೋಪಮಾನ ಕೋಶಾದಿ ಶಕ್ತಿಗ್ರಾಹಕ ...ಗ್ರೀಬಲದಿಂದ ಶಿವಪರವಾಗಿಯೂ, ವಿಷ್ಣುಪರವಾಗಿಯೂ, ಬ್ರ ...ವಾಗಿಯೂ ಕೆಲವರು ಅರ್ಥಗಳನ್ನು ಹೇಳುತ್ತಿದ್ದಾರೆ. ಅವುಗಳೆಲ್ಲ ...ನಿ ತಾತ್ಪರ್ಯವಲ್ಲವೆಂದು ಮೇಲೆ ಹೇಳಲ್ಪಟ್ಟ ಕಾರಣಗಳಿಂದಲೇ ಸಿ ...ಗುವದಾಗಿ ಪ್ರಕೃತೋಚಿತವಲ್ಲದ್ದರಿಂದ ಬಿಡಲ್ಪಟ್ಟವೆಂದು ತಿಳಿಯ...

...ದಿ. ಇಷ್ಟದೇವತೆಯನ್ನು ನಮಸ್ಕರಿಸಿ, ಅಧ್ಯೇತೃಗಳಿಗಭಿ ...ತ್ತಾರಿಕೆ॥ ...ಮುಂಟಾಗುವದಕ್ಕೋಸ್ಕರ ತಾನು ಹೇಳಲುಪಕ್ರಮಿಸಿದ ಗ್ರಂಥ ...ರಿನ್ನೊಂದಿಗೆ ಪ್ರಯೋಜನವನ್ನು ತಿಳಿಸುತ್ತಾನೆ, ಸಹಾರ್ಥ... ...ವ ಶ್ಲೋಕದಿಂದ॥

CC-0. Jangamwadi Math Collection. Digitized by eGangotri

ಮೂ॥ ಸಮಾಹೃತ್ಯಾನ್ಯತಂತ್ರಾಣಿ ಸಂಕ್ಷಿಪ್ತೈಃ ಪ್ರತಿಸಂಸ್ಕೃತೈಃ॥ ಸಂಪೂರ್ಣಮುಚ್ಯತೆವರ್ಗೈರ್ನಾಮಲಿಂಗಾನುಶಾಸನಂ ॥೨॥

ಟೀ॥ ಅನ್ಯತಂತ್ರಾಣಿ-ಇತರರಗಳಾದತ್ರಿಕಾಂಡಿ, ವಾಗುರಿ, ಉತ್ಪಲ, ವಾಮನಾದಿ ಕೋಶಗಳನ್ನು * ಸಮಾಹೃತ್ಯ-ಸಂಗ್ರಹಿಸಿ,ಸಂಕ್ಷಿಪ್ತೈಃ ಮಿತವಾಗಿಮಾಡಲ್ಪಟ್ಟವಾಗಿಯೂ, ಪ್ರತಿಸಂಸ್ಕೃತಶಬ್ದಗಳಿಗೆ ಅರ್ಥವನ್ನುತಿಳಿಸುವ ಸಂಸ್ಕೃತಪ್ರತಿಪದಗಳುಳ್ಳವಾಗಿಯೂ ಇರುವ,ವರ್ಗೈಃ-ಅನ್ಯೋನ್ಯಸಂಬಂಧಿ ಪರ್ಯಾಯಪದಗಳ ಸಮೂಹಗಳಿಂದ,ಸಂಪೂರ್ಣಂ-ತುಂಬಿಯಿರುವ, ನಾಮಲಿಂಗಾನುಶಾಸನಂ=ನಾಮಲಿಂಗಾನುಶಾಸನವೆಂಬಗ್ರಂಥವು, ಉಚ್ಯತೇ=ಹೇಳಲ್ಪಡುತ್ತದೆ, ॥೨॥

ತಾತ್ಪರ್ಯವು॥ ಈ ಅಮರಕೋಶವು ನಿರ್ಮಿಸಲ್ಪಡುವದಕ್ಕಿಂತಲೂ ಪೂರ್ವದೊಳಗಿದ್ದ ವರರುಚಿಕೋಶ, ವಾಗುರಿಕೋಶ, ವಾಮನಕೋಶ, ತ್ರಿಕಾಂಡಿಕೋಶ, ಉತ್ಪಲಮಾಲಿಕೆಮುಂತಾದ ಗ್ರಂಥಗಳು ದೊಡ್ಡದೊಡ್ಡವಾಗಿಯೂ ಬಳಿಕ ಸಾಲದೆ ಇರುವ ಬಹುಪದಗಳುಳ್ಳವಾಗಿಯೂ, ಒಂದುಪ್ರಕರಣದಲ್ಲಿ ಸೇರತಕ್ಕ ಸಂಬಂಧವುಳ್ಳ ಪದಗಳೆಲ್ಲಾ ಗುಂಪಾಗಿ ಒಂದೇಕಡೇಸಿಕ್ಕುವಹಾಗಿಲ್ಲದೆಬೇರೆಬೇರೆ ಕಡೆಗಳಲ್ಲಿರುವದರಿಂದಲೂಸಹ, ಬಾಲಕರಿಗೆ ಸುಲಭವಲ್ಲದೆಯೂಇಷ್ಟು ಪ್ರಯೋಜನಕರವಾಗದೆಯೂ ಇರುವದರಿಂದ ಅಂತಾಕೋಶಗಳಲ್ಲಿ ಪ್ರಯೋಗದಬಳಿಕೆ ಸಾಲದೇ ಅನುಪಯುಕ್ತಗಳಾದ ಪದಗಳನ್ನು [illegible] ಬೇಕಾದ ಪದಗಳನ್ನೇ ಹುಡಿಕಿ ಅಂತಪ್ರ[illegible]ಯುಕ್ತ ಪ್ರಕರಣ[illegible]ಸೇರತಕ್ಕವುಗಳನ್ನು ಗುಂಪುಗುಂಪಾಗಿ ಜೋಡಿಸಿ [illegible]ಗಡಿಸಿ, ಪದಕ್ಕೆ ಸರಿಯಾದ ಅರ್ಥವನ್ನು ತಿಳಿಸುವಪರ್ಯಾಯಪದಗಳೊಂದಿಗೆ ವರ್ಗಗಳಾಗಿಮಾಡಿ ಅಂತವುಗಳಿಂ ಬಳಿಕೆಯಾಗಿರುವ ಸಂಸ್ಕೃತಪದಗಳ ಪ್ರಯೋಗಾದಿ ವಿಷಯದಲ್ಲಿ ಸಂಪೂರ್ಣ ಸಹಾಯಕವಾಗಿರುವಂತೆ ಪ್ರಥಮಾಂತ ಶಬ್ದರೂಪ ಲಿಂಗವಚನಾದಿಗಳನ್ನು ಹೀಗೆಯೇ ಸರಿಯೆಂಬುವದಾಗಿ ವ್ಯಾಕರಣಕ್ಕೂ ಮಹಾ ಕವಿಪ್ರಯೋಗರೂಢಿಗೂ ವಿರೋಧವಿಲ್ಲದೆ ನಿಯಮಿಸುವದರಿಂದ ನಾಮಲಿಂಗಾನುಶಾಸನವೆಂಬ ಹೆಸರಿಟ್ಟು ಈಗ್ರಂಥವನ್ನು ರಚಿಸುವೆನೆಂಬದಾಗಿ ॥೨॥

ಅವತಾರಿಕೆ॥ಆಯ್ಯಾನಾಮವೆಂದರೆ ರೂಪ ಸಿದ್ಧಿಯುಳ್ಳಪದಗಳು ಅಂತಾ ಪ್ರತಿಪದಗಳಿಗೂ ಲಿಂಗವನ್ನು ಹೇಳಿದರೆ ಗ್ರಂಥವು ಅಧಿಕವಾಗುತ್ತ

CC-0. Jangamwadi Math Collection. Digitized by eGangotri

ದೆಯೋ ಹೊರತು ಸಂಗ್ರಹವಾಗುವದಿಲ್ಲ ಹೇಳದಿದ್ದರೆ ಗ್ರಂಥವು ಸಂಪೂರ್ಣವಲ್ಲ. ಉಭಯಥಾಪಿ ಪ್ರತಿಜ್ಞಾ ಪೂರೈಸುವಬಗೆ ಏನೆಂಬ ಶಂಕೆಯುಂಟಾಗಿ ಅದನ್ನು ಪರಿಹರಿಸುವದಕ್ಕೋಸ್ಕರ ಮುಂದೆ ಗ್ರಂಥದಲ್ಲಿ ಹೇಳಲ್ಪಡುವ ಗುರುತುಗಳನ್ನು ಮೂರುಶ್ಲೋಕಗಳಿಂದ ಸಂಜ್ಞಾರೂಪವಾಗಿ ಮೊದಲು ತಿಳಿಸುತ್ತಾನೆ,

ಲಿಂಗನಿರ್ಣಯ.

ಮೂ॥ ಪ್ರಾಯಶೋರೂಪಭೇದೇನ ಸಾಹಚರ್ಯಾಚ್ಚ ಕುತ್ರಚಿತ್।
ಸ್ತ್ರೀಪುನ್ನಪುಂಸಕಂ ಜ್ಞೇಯಂ ತದ್ವಿಶೇಷವಿಧೇಃ ಕ್ವಚಿತ್ ॥೩॥

ಟೀ॥ ಸ್ತ್ರೀಪುನ್ನಪುಂಸಕಂ-ಸ್ತ್ರೀಲಿಂಗನಪುಂಸಕಲಿಂಗಗಳು, ಪ್ರಾಯಶಃ-ಬಹಳವಾಗಿ, ರೂಪಭೇದೇನ-ರೂಪ-ಶಬ್ದಪ್ರಾತಿಪದಿಕದ, ಭೇದೇನ-ಸ್ತ್ರೀಪ್ರತ್ಯಯಾದಿಗಳಿಂದಾದ, ದೀರ್ಘ, ಅನುಸ್ವಾರ, ವಿಸರ್ಗಾದಿಗಳಿಂದ ಪ್ರಥಮಾಂತಶಬ್ದವು ಬೇರೆಬೇರೆಯಾಗಿರುವದರಿಂದಲೂ, ಕುತ್ರಚಿತ್ ರೂಪಭೇದದಿಂದಲೇ ತಿಳಿದುಕೊಳ್ಳುವದಕ್ಕೆ ಅಶಕ್ಯವಾಗಿರುವ ಸ್ಥಳದಲ್ಲಿ, ಸಾಹಚರ್ಯಾಚ್ಚ-ಪ್ರಸಿದ್ಧವಾಗಿ ತಿಳಿಯಲ್ಪಟ್ಟ ಲಿಂಗವುಳ್ಳ ಶಬ್ದದ ಸಾನ್ನಿಧ್ಯದಿಂದಲೂ, ಕ್ವಚಿತ್-ರೂಪಭೇದದಿಂದಲೂ, ಸಾಹಚರ್ಯದಿಂದಲೂ ಸಹ ತಿಳಿದುಕೊಳ್ಳುವದಕ್ಕೆ ಅಶಕ್ಯವಾದಸ್ಥಳದಲ್ಲಿ, ತದ್ವಿಶೇಷವಿಧೇಃ ತತ್-ಆಶಬ್ದಲಿಂಗಗಳ, ವಿಶೇಷವಿಧೇಃ-ಈ ಶಬ್ದವೀಲಿಂಗವುಳ್ಳದ್ದೆಂದು ಕಂಠತಃ ಹೇಳಲ್ಪಡುವದರಿಂದಲೂ. ಜ್ಞೇಯಂ-ತಿಳಿಯತಕ್ಕದ್ದು. ॥೩॥

ಅಭಿಪ್ರಾಯ॥ ಯಾವಶಬ್ದದ ಯಾವಲಿಂಗವಂತಿಳಿದುಕೊಳ್ಳಬೇಕಾದರೂ ಆಶಬ್ದವು ಪ್ರಯೋಗಿಸಲ್ಪಟ್ಟಿರುವಪ್ರಥಮಾಂತರೂಪದಲ್ಲಿ ಯಾವಲಿಂಗಕ್ಕೆ ತಕ್ಕ ದೀರ್ಘಾದಿ ಪ್ರತ್ಯಯ ಭೇದತೋರುತ್ತದೆಯೋ ಆ ಲಿಂಗವೆಂದು ನಿಶ್ಚಯಿಸಬಹುದು. ಈ ಯುಕ್ತಿಯು ಬಹುಶಃ ಎಲ್ಲಕಡೆಯಲ್ಲಿಯೂ ಸಾಧಕವಾಗುತ್ತ. ಕೆಲವುಕಡೆ ಹಾಗೆ ತಿಳಿಯದಿದ್ದರೆ ಅಂತಾಶಬ್ದದ ಸಮೀಪದಲ್ಲಿಯೆ ಪ್ರಸಿದ್ಧವಾಗಿ ತಿಳಿಯಬರುವಲಿಂಗವುಳ್ಳ ಪರ್ಯಾಯಪದವು ಪ್ರಯೋಗಿಸಲ್ಪಟ್ಟಿರುತ್ತದೆಯಾಗಿ; ಅದರಂತೆಯೇ ತಿಳಿದುಕೊಳ್ಳಬಹುದು. ಹಾಗೂ ತಿಳಿದುಕೊಳ್ಳುವದಶಕ್ಯವಾದಕಡೆ ಈ ಶಬ್ದವೀಲಿಂಗವೆಂದು ಹೇಳಲ್ಪಟ್ಟೇ ಇರುವದರಿಂದತಿಳಿಯಬಹುದೆಂಬದಾಗಿ ॥೩॥*॥ದೃಷ್ಟಾಂತಸಮನ್ವಯವು॥*॥ನಾಮಾಭೇದವೆಂತಲೂನಾಮವಿಶೇಷಭೇದಮೆಂತಲೂ, ನಾಮ ಪರಾಮರ್ಶಿಸರ್ವನಾಮಶಬ್ದ ಭೇದಃ

CC-0. Jangamwadi Math Collection. Digitized by eGangotri

ರೂಪಭೇದವೆಂಬುವದು ಮೂರು ಪ್ರಕಾರವಾಗಿರುತ್ತದೆ. ಇವುಗಳಿಂದಲಿಂಗಭೇದವನ್ನು ತಿಳಿದುಕೊಳ್ಳುವ ಬಗೆಹ್ಯಾಗೆಂದರೆ (ಕೌಮೋದಕೀಗದಾಖಡ್ಗೋನಂದಕಃಕೌಂಸ್ತುಭೋಮಣಿಃ) ಈ ಸ್ಥಳದಲ್ಲಿನಾಮವಾದ ಕೌಮೋದಕೀಶಬ್ದದಲ್ಲಿ ಸ್ತ್ರೀಪ್ರತ್ಯಯವಾದ ಜೀಪ್‌ಬಂದು ಈಕಾರ ದೀರ್ಘ ತೋರುವದರಿಂದಲೂ, ಹೀಗೆಯೇಗದಾಶಬ್ದಕ್ಕೆ ಟಾಪ್ ಬಂದು ಆಕಾರ ದೀರ್ಘ ತೋರುವದರಿಂದಲೂ, ಈ ನಾಮಗಳೆರಡರರೂಪಭೇದದಿಂದಲೇಸ್ತ್ರೀ ಲಿಂಗವೆಂದು ತಿಳಿದುಕೊಳ್ಳಬಹುದಾಗಿದೆ. ನಂದಕಕೌಂಸ್ತುಭಶಬ್ದಗಳೆರಡರಲ್ಲಿಯೂ ಪುಲ್ಲಿಂಗ ಪ್ರತ್ಯಯ ಹ್ರಸ್ವಾಕಾರ ವಿಸರ್ಗಗಳಭೇದ ತೋರುತ್ತಿರುವದ್ದರಿಂದ ಪುಲ್ಲಿಂಗವೆಂದು ತಿಳಿದುಕೊಳ್ಳಬಹುದಾಗಿದೆ (ಗಂಡಕಪೋಲೌತತ್ಪರಾಹನುಃ) ಈಸ್ಥಳದಲ್ಲಿ (ಹನುಃ) ಎಂಬನಾಮರೂಪದಉತ್ವವಿಸರ್ಗಗಳಭೇದದಿಂದಹನುಶಬ್ದವು ಸ್ತ್ರೀಲಿಂಗವುಳ್ಳದ್ದೋ, ಪುಲ್ಲಿಂಗವುಳ್ಳದ್ದೋ ಗೊತ್ತಾಗಲಿಲ್ಲ. ಹನುವೆಂಬ ನಾಮಕ್ಕೆ ವಿಶೇಷಣವಾದ ತತ್ಪರಾಶಬ್ದನ್ನ ಸ್ತ್ರೀಲಿಂಗವಾಗಿ ರೂಪಭೇದದಿಂದಲೇ ತಿಳಿಯಬರುವದ್ದರಿಂದ ಅದಕ್ಕೆ ವಿಶೇಷ್ಯವಾದ ಹನುಶಬ್ದಕ್ಕೂಸ್ತ್ರೀಲಿಂಗವೆಂದು ನಿಶ್ಚಯಿಸಬೇಕು. (ಕೃತಾರ್ಥೀಕೃತ್ಯಕೃತ್ಸ್ನೇಹಪಾತ್ರಂಸೈವಾಲ್ಪಕೃತಪಂಪುಮಾನ್) ಈಸ್ಥಳದಲ್ಲಿ (ಸಾ) ಎಂಬ ನಾಮ ಪರಾಮರ್ಶಿಯಾದಸರ್ವನಾಮಶಬ್ದದ ರೂಪಭೇದದಿಂದ ಕೃತಾಶಬ್ದಕ್ಕೆಸ್ತ್ರೀಲಿಂಗನಿರ್ಣಯಮಾಡತಕ್ಕದ್ದು. ಈ ಮೇರೆ ಮೂರುಬಗೆಯಾದರೂಪ ಭೇದಂಗಳನ್ನೂ ಕಂಡು ಆಯಾ ಸ್ಥಳಗಳಲ್ಲಿ ತಕ್ಕಹಾಗೆ ಲಿಂಗವನ್ನು ನಿರ್ಣಯಿಸಿಕೊಳ್ಳಬಹುದು (ಅಶ್ವಯುಗಶ್ವಿನೀ) ಇಲ್ಲಿಸಂದಿಗ್ಧಲಿಂಗಕವಾದಅಶ್ವಯುಕ್ಶಬ್ದಕ್ಕೆ ನಿಶ್ಚಿತತಸ್ತ್ರೀಲಿಂಗವಾದ ಅಶ್ವಿನೀಶಬ್ದದ ಸಾಹಚರ್ಯದಿಂದಸ್ತ್ರೀಲಿಂಗವನ್ನೂ (ಭಾನುಃಕರಃ) ಈಸ್ಥಳದಲ್ಲಿ ಲಿಂಗಸಂದಿಗ್ಧವಾದ ಭಾನುಶಬ್ದಕ್ಕೆನಿಶ್ಚಿತಪುಲ್ಲಿಂಗಕವಾದ ಕರಶಬ್ದಸಾಹಚರ್ಯದಿಂದ ಪುಲ್ಲಿಂಗವನ್ನೂ (ವಿಯದ್ವಿಷ್ಣುಪದಂ) ಇಲ್ಲಿ ಸ್ತ್ರೀಲಿಂಗದಂತೆಕಾಣಬರುವ ವಿಯಚ್ಛಬ್ದಕ್ಕೆ ನಿಶ್ಚಿತದನಪುಂಸಕಲಿಂಗಕವಾದ ವಿಷ್ಣುಪದಎಂಬುವಧರ ಸಾಹಚರ್ಯ ವಿರುವದರಿಂದ ನಪುಂಸಕಲಿಂಗವನ್ನು ನಿಶ್ಚಯಿಸಬೇಕಾಗಿ ಆದೇಶವೆಂಕ (ತಟಿತ್ಸೌದಾಮಿನೀವಿದ್ಯುಚ್ಚಂಚಲಾ) ಇದು ಮುಂತಾದ ಸ್ಥಳಗಳಲ್ಲೆಲ್ಲ ಸಾಹಚರ್ಯದಿಂದಲಿಂಗನಿರ್ಣಯಮಾಡಿಕೊಳ್ಳಬೇಕು. ವಿಶೇಷವಿಧಿಯೆಂಬುವದು ನಾಲ್ಕುಸ್ಥಳಗಳೊ

CC-0. Jangamwadi Math Collection. Digitized by eGangotri

ಗುಂಟಾಗುತ್ತೆ. ಹೇಗೆಂದರೆ—ರೂಪಭೇದದಿಂದಲಿಂಗನಿರ್ಣಯವಾಗದೇ ಯಿರುವಸ್ಥಳಗ. ಸಾಹಚರ್ಯದಿಂದಲಿಂಗನಿರ್ಣಯವಾಗದೇಇರುವಸ್ಥಳಗ. ಸಾಹಚರ್ಯದಿಂದಲಿಂಗಭ್ರಾಂತಿಯುಂಟಾಗುವಸ್ಥಳಗ.ಬಹುಲಿಂಗಗಳಾತಿಳಿಸಲ್ಪಡಬೇಕಾದ ಸ್ಥಳಗ.ಈ ನಾಲ್ಕುಕಡೆಯಲ್ಲಿಯೂ ಈ ಶಬ್ದವೀಲಿಂಗ ವೆಂಬ ವಿಶೇಷವಿಧಿಯೇ ಹೇಳಲ್ಪಟ್ಟಿರುತ್ತವೆ. ಇವುಗಳಿಗೆ ಕ್ರಮದಿಂದುದಾಹರಣಗಳು.(ವಲ್ಲರಿಮಂಜರೀಸ್ತ್ರಿಯಾಂ) ಇಲ್ಲಿವಲ್ಲರೀಮಂಜರೀಶಬ್ದಗಳ ಇಂನ್ನಂತತ್ವದಿಂದಲಿಂಗಸಂಶಯ ಉಟಾಯಿತಾಗಿ, ರೂಪಭೇದದಿಂದ ಸ್ತ್ರೀತ್ವನಿರ್ಣಯವಾಗಲಿಲ್ಲ. ಆದ್ದರಿಂದಸ್ತ್ರೀಲಿಂಗ ನಿರ್ಣಯಾರ್ಥವಾಗಿ(ಸ್ತ್ರೀಯಾಂ)ಎಂಬುವ ವಿಶೇಷವಿಧಿಯುಂಟಾಯಿತು. ೨ನೇದು (ಸ್ತ್ರಿಯಃಸುಮನಸಃ ಪುಷ್ಪಂ ,ಎಂಬುವದಕ್ಕೆ ಸ್ತ್ರೀಲಿಂಗತಾನಿರ್ಣಯವಾಗಲಿಲ್ಲ. ಅದಕ್ಕಾಗಿ(ಸ್ತ್ರೀಯಃ)ಎಂಬುವ ವಿಶೇಷವಿಧಿಯುಂಟಾದ್ದರಿಂದ(ಸುಮನಸಃ)ಎಂಬುವದುಸ್ತ್ರೀಲಿಂಗಕವೆಂದುನಿಶ್ಚಿತವಾಯಿತು. ೩ನೇದು (ಖನಿಃಸ್ತ್ರಿಯಾಮಾಕರಸ್ಯಾತ್) ಈಸ್ಥಳದೊಳಗೆ ಖನಿಶಬ್ದ ಪುರೂಪಭೇದದಿಂದವುಂಸ್ತ್ರೀಲಿಂಗ ಸಂದಿಗ್ಧವಾಗಿಥೆ. ಇದಕ್ಕೆನಿಶ್ಚಿತಪುಲ್ಲಿಂಗಕವಾದ(ಆಕರಃ)ಎಂಬುವ ಪರ್ಯಾಯ ಪದಸಾಹಚರ್ಯವಿರುವದ್ದರಿಂದ ಪುಲ್ಲಿಂಗತ್ವವೆಂಬ ಭ್ರಾಂತಿಯುಂಟಾಗಿ ವಿರುದ್ಧಾರ್ಥಾಪತ್ತಿಬಂದಲ್ಲಿ ಅದಕ್ಕೆಅಪವಾದರೂಪವಾಗಿ(ಸ್ತ್ರಿಯಾಂ) ಎಂಬುವವಿಶೇಷವಿಧಿಯುಂಟಾದ್ದರಿಂದ ಖನಿಶಬ್ದಕ್ಕೆಸ್ತ್ರೀತ್ವವೇನಿಶ್ಚಿತವಾಯಿತು. ೪ನೇದು(ವಿಟಂಕಂ ಪುನ್ನಪುಂಸಕಂ) (ಕಟಂತ್ರಿಷು) (ಅಶನಿದ್ವಯೋಃ)ಇವುಮುಂತಾದಸ್ಥಳಗಳಲ್ಲಿ ಅನೇಕ ಲಿಂಗಗಳುಂಟೆಂಬುದನ್ನು ತಿಳಿಸುವದಕ್ಕಾಗಿ ವಿಶೇಷವಿಧಿಗಳುಂಟಾದವು. ಯದ್ಯಪಿ—ರೂಪಭೇದದಿಂದಲೇಲಿಂಗನಿರ್ಣಯ ವಾಗುವ ಸ್ಥಳದೊಳಗಾದಾಗ್ಯೂ ಈಶಬ್ದಕ್ಕೆ ಈ ಪ್ರಯೋಗದ ರೂಪಭೇದದಿಂದ ತಿಳಿಯಬರುವ ಲಿಂಗವೊಂದೇ ಯೆಂಬುವ ಜ್ಞಾನವನ್ನು ನಿವರ್ತಿಗೊಳಿಸುವದಕ್ಕೋಸ್ಕರ(ದ್ವಯೋಃ)(ತ್ರಿಷು)ಹೀಗೆ ಬಹುಲಿಂಗತಾಜ್ಞಾಪಕ ವಿಶೇಷವಿಧಿಗಳುಂಟಾಗಿರುತ್ತವೆ. ಈಮೇರೆಮುಂದೆ ಹೇಳಲ್ಪಡುವಅಮರ ಕೋಶದೊಳಗೆ ಉದಹರಣವನ್ನು ಸಮನ್ವಯಿಸಿಕೊಂಡು ಲಿಂಗಗಳನ್ನು ಸುಲಭವಾಗಿ ನಿಶ್ಚಯಿಸಬಹುದು.

ಅವತರಣಿಕೆ॥*॥ ಬಹುಶಃ ರೂಪಭೇದದಿಂದಲೇ ಲಿಂಗನಿರ್ಣಯವಾಗು

CC-0. Jangamwadi Math Collection. Digitized by eGangotri

ತ್ತ್ರೀಂಬು ಹೇಳಲ್ಪಟ್ಟದ್ದು ಯುಕ್ತವಲ್ಲ. ಹೇಗಂದರೆ-ಸಮಾನಶಿವಯ್ಯ ವಗಳಲ್ಲಿಇದುಸರಿಬೀಳುದಿಲ್ಲ. ಏತಕ್ಕಂದರೆ--ಸಮಾಹಾರದ್ವಂದ್ವಂವೆಂಬಸಮಾಸವಾಕ್ಯದಲ್ಲಿ ಸೇರಿಯಿರುವ ನಾನಾಲಿಂಗಶಬ್ದಕ್ಕೂ ಸಮಾಸಾಂತದಲ್ಲಿ ನಪುಂಸಕಲಿಂಗವೆ ವಿಧಿಸಿದ್ಧವಾದ್ದರಿಂದ ಮಧ್ಯಸೇರಿದವುಗಳಿಗೆ ರೂಪಭೇದವುತೋರುವದಿಲ್ಲ.ಲಿಂಗಶಂಕೆಯುವದಿಲ್ಲ.ಮತ್ತು ಇತರೇತರದ್ವಂದ್ವ ಸಮಾಸದಲ್ಲಿಯೂ(ಪರವಲಿಂಗಂದ್ವಂದ್ವತತ್ಪುರುಷಯೋಃ)ಎಂಬಶಾಸ್ತ್ರದಿಂದಮುಂದೆ ಇರುವ ಶಬ್ದದ ಲಿಂಗದಹಾಗೆಯೇ, ಅದರೊಳಗೆಸೇರಿ ಸಮಾಸಾಂತರ್ಗತಗಳಾದ ಹಿಂದಣ ಶಬ್ದಗಳಿಗೂ ಲಿಂಗವು ತಿಳಿಯಲ್ಪಡಬಹುದೆಂದರೆ--ಸಮಾನಲಿಂಗಕ ಪದಘಟಿತಸಮಾಸದಲ್ಲಿ ಉಪಪನ್ನವಾದಾಗ್ಯೂವಿಭಿನಲಿಂಗಕಪದಗಳಿಗೂಸವಿಾಪವಿರುತ್ತದೆಯಾಗಿ(ಪೂರ್ವವದಶ್ವಬಡಬೌ)ಎಂಬುಪದುಮುಂತಾದವಿಶೇಷವಿಧಿಗಳಿಂದಪರಲಿಂಗಕ್ಕೆಪ್ರತಿಷೇಧ ಘುಂಟಾಗಿ ಉತ್ತರ ಪದಲಿಂನಿರ್ಣಯವೂ ಆಗುವದಿಲ್ಲ(ಮಾತಾಚಪಿತಾಚಪಿತರೌ)ಎಂಬುವದು ಮೊದಲಾದದ್ವಂದ್ವೈಕಶೇಷ ಸಮಾಸಗಳಲ್ಲಿ ಲುಪ್ತವಾದ ಮಾತೃಶಬ್ದಾದಿಗಳಿಗೂ ನಿರ್ಣಯವಾಗುವದಿಲ್ಲ! ಹೀಗಿರುವಲ್ಲಿ ಸಮಾಸ ವಾಕ್ಯದೊಳು ಸೆರಿದ ಪದಗಳಿಗೆ ರೂಪಭೇದದಿಂದ ಲಿಂಗನಿರ್ಣಯ ಹ್ಯಾಗಾದೀತೆಂಬುವದು ಮುಂತಾದ ಸಂಶಯಗಳನ್ನು ಪರಿಹರಿಸುವದಕ್ಕೋಸ್ಕರ ಪ್ರತಿಜ್ಞಾ ಶ್ಲೋಕವನ್ನು ಹೇಳುತ್ತಾನೆ

ಮೂ॥ ಭೇದಾಖ್ಯಾನಾಯನದ್ವಂದ್ವೋನ್ಯೈಕಶೇಷೋನಸಂಕರಃ।ಕೃತೋತ್ರಭಿನ್ನಲಿಂಗಾನಾಮನುಕ್ತಾನಾಂಕ್ರಮಾದೃತೆ ॥೪॥

ಟೀ।ಅತ್ರ-ಈಗ್ರಂಥದಲ್ಲಿ, ಅನುಕ್ತಾನಾಂ-ಮಾಂತ್ರೊಂದುಸ್ಥಳದಲ್ಲಿಹೇಳಲ್ಪಡದೇಯಿರುವ, ಭಿನ್ನಲಿಂಗಾನಾಂ-ಬೇರೆಬೇರೆ ಲಿಂಗಳುಳ್ಳಪದಗಳಿಗೆ,ಭೇದಾಖ್ಯಾನಾಯ-ಲಿಂಗಭೇದವನ್ನು ಹೇಳುವದಕೊಸ್ಕರ, ದ್ವಂದ್ವಃ-ದ್ವಂದ್ವಸಮಾಸವು, ನಕೃತಃ-ಮಾಡಲ್ಪಟ್ಟದ್ದಲ್ಲ, ಕ್ರಮಾದೃತೆ-ಪ್ರಸ್ತುತಸಂಗತಿಯನ್ನು ವಿನಾ,ಸಂಕರಃ-ಕೂಡಿಕೆಯು,ನಕೃತಃ-ಮಾಲ್ಪಟ್ಟದ್ದಲ್ಲ ॥ತಾ॥ ಅವತರಣಿಕೆಯೊಳಗಾಕ್ಷೇಪಿಸಲ್ಪಟ್ಟದೋಷಗಳಿಲ್ಲವೂಸಮಾಸವಿಷಯವಾದಲ್ಲಹೆ ಟೀಯಾವಪದಗಳಿಗೆಇದೇಅಮರದಮತ್ತೊಂದುಕಡೆಯಲ್ಲಿಕಾರಣಾಂತರದಿಂದ ಲಿಂಗವು ತಿಳಿಸಲ್ಪಟ್ಟಿರುತ್ತದೆಯೋ, ಅಂತಾ ಪದಗಳಿಗೆ ಲಿಂಗವು ಸುಬೋಧವೇಆದ್ದರಿಂದ ದ್ವಂದ್ವೈಕಶೇಷ ಸಂಕರ ಸಮಾಸಗಳ

CC-0. Jangamwadi Math Collection. Digitized by eGangotri

ನ್ನು ಮಾಡಿದಾಗ್ಯೂ ಭಂಗವಿಲ್ಲವು. ಹಾಗೆ ಮತ್ತೊಂದುಕಡೆ ಲಿಂಗವು ತಿಳಿಸಲ್ಪಡದೇ ಇರುವ ನಾನಾಲಿಂಗ ಶಬ್ದಗಳಿಗೆ ಈ ಗ್ರಂಥದಲ್ಲಿ ಲಿಂಗವು ಸ್ಪಷ್ಟವಾಗಿ ನಿರ್ಣಯಿಸತಕ್ಕಬಗ್ಯೆ ಅಂತಾ ದ್ವಂದ್ವೈಕಶೇಷ ಸಂಕರಸಮಾಸಗಳನ್ನು ಮಾಡುವದಿಲ್ಲವಾಗಿ, ಈ ಕೋಶದೊಳಗೆ ರೂಪಭೇದದಿಂದ ಪ್ರಾಯಶಃ ಲಿಂಗನಿರ್ಣಯವಾಗುತ್ತದೆ ಹ್ಯಾಗಂದರೆ--*ಉದಾಹರಣ*(ದ್ಯೋದಿವೌದ್ವೇ--ಸ್ವರ್ಗನಾಕತ್ರಿದಿವತ್ರಿದಶಾಲಯಾಃ|ಜನುರ್ಜನನಜನ್ಮಾನಿ) ಇವು ಮುಂತಾದ ಸ್ಥಳಗಳಲ್ಲಿ ಭಿನ್ನಲಿಂಗಗಳಾದ ಪದಗಳಿಗೇನೇ ದ್ವಂದ್ವಸಮಾಸ ಮಾದ್ದರಿಂದ ಪರಪದ ಲಿಂಗದಂತೆ ತತ್ಸಮಾಸಗತವಾದ ಪೂರ್ವಪದಗಳಿಗೂ ಲಿಂಗ ತಿಳಿಯಬಹುದು, (ನಾಸತ್ಯಾವಶ್ವಿನೌದಸ್ರೌ) (ಜೀಮೂತೌಮೇಘಪರ್ವತೌ) ಇವು ಮುಂತಾದ ಸ್ಥಳಗಳಲ್ಲಿಯೂ ಅಭಿನ್ನಲಿಂಗಕಪದಗಳಿಗೇನೇ ಏಕಶೇಷಸಮಾಸ ಮಾಡಲ್ಪಟ್ಟಿರುವದರಿಂದ ಅದೂ ಲಿಂಗನಿರ್ಣಯಭಂಗಕಾರಿಯಲ್ಲ. ಆದರೆ ನಾನಾಲಿಂಗಪದಗಳಿಗೂ ಸಹ (ಅಪ್ಸರೋಯಕ್ಷರಕ್ಷೋಗಂಧರ್ವಕಿನ್ನರಾಃ) ಎಂಬುವದು ಮುಂತಾದ ಸ್ಥಳಗಳಲ್ಲಿ ದ್ವಂದ್ವಸಮಾಸವು ಮಾಡಲ್ಪಟ್ಟದೆ. ಅದು ವಿರುದ್ಧವಲ್ಲ ಹೇಗಂದರೆ, ಅವು ಅನುಕ್ತಗಳಲ್ಲದೇ ಅಮರದ ಮತ್ತೊಂದು ಕಡೆಯಲ್ಲಿ (ಸ್ತ್ರಿಯಾಂಬಹುಷ್ವಪ್ಸರಸಃ) ಎಂಬದಾಗಿ ಅಪ್ಸರಶ್ಶಬ್ದಕ್ಕೆ ಸ್ತ್ರೀಲಿಂಗವು ಹೇಳಲ್ಪಟ್ಟದೆ. ಮತ್ತು (ಯಕ್ಷೈಕಪಿಂಗೈಲಬಿಲ=ಯಾತುರಕ್ಷಸೀ) ಎಂಬುವಸ್ಥಳಗಳಲ್ಲಿ, ಯಕ್ಷರಕ್ಷಶ್ಶಬ್ದಾದಿಗಳಿಗೆ ಲಿಂಗವು ನಿಶ್ಚಿತವಾಗಿದೆ. ಆದ್ದರಿಂದ ಉಕ್ತವಾದ ಭಿನ್ನಲಿಂಗಕ ಶಬ್ದಗಳಿಗೆ ದ್ವಂದ್ವಾದಿ ಸಮಾಸಗಳು ಮಾಡಿದರೆ ಅದು ಲಿಂಗನಿರ್ಣಯೋಪಾಯಕ್ಕೆ ವಿರುದ್ಧವಲ್ಲ: ಹಾಗೆಯೆ ಮಾತಾಪಿತರೌಪಿತರೌ) ಇತ್ಯಾದಿ ಸ್ಥಳಗಳಲ್ಲಿ ಏಕಶೇಷ ಸಮಾಸವಾದಾಗ್ಯೂ (ಜನಯಿತ್ರೀಪ್ರಸೂರ್ಮಾತಾ) ಇತ್ಯಾದಿಸ್ಥಳಗಳಲ್ಲಿ ಉಕ್ತಲಿಂಗಕಗಳಾಗಿರುವದ್ದರಿಂದ ಬಾಧಕವಿಲ್ಲ. ಮತ್ತು ಆಯಾಯ ವರ್ಗಗಳಲ್ಲಿ ಸೇರತಕ್ಕ ಪದಗಳಿಗೆಲ್ಲ ಆಯಾ ಕಡೆಯ ಹೇಳಬೇಕಾದ ಆವಶ್ಯಕದಿಂದ ಭಿನ್ನಲಿಂಗಕ ಪದಗಳಿಗೆ ಸಮಾಸದಲ್ಲಿ ಸಾಂಕರ್ಯ ವುಂಟಾದಾಗ್ಯೂ ವಿಶೇಷವಿಧ್ಯಾದಿಗಳಿಂದ ಅವು ಉಕ್ತಲಿಂಗಗಳಾಗಿರುವವಾಗಿ ಅಂತಾಸಾಂಕರ್ಯವು ಬಾಧಕವಲ್ಲ. ಆದರೆ ಈ ಮೇರೆ ಸಂಕರಗಳನ್ನೂ ಮಾಡುತ್ತಾ ಅದಕ್ಕಾಗಿ ವಿಶೇಷವಿಧಿಗಳನ್ನು ಹೇಳುತ್ತಾ ಬಂದರೆ ಗ್ರಂಥವು ಹೆಚ್ಚು (ಸಮಾ

CC-0. Jangamwadi Math Collection. Digitized by eGangotri

ಕೃತ್ಯಸಂಕ್ಷಿಪ್ತೈಃ) ಎಂಬದಾಗಿ ಪೂರ್ವದಲ್ಲಿಮಾಡಲ್ಪಟ್ಟ ಸಂಕ್ಷೇಪಕ್ಕ ತಿಜ್ಞಿಗೆ ಲೋಪಬರುತ್ತೆ. ರತ್ನಕೋಶಾದಿ ಗ್ರಂಥಗಳಲ್ಲಿ ಮೂರುಲಿಂಗಗಳ ಪದಗಳನ್ನೂ ಬೇರೆಬೇರೆ ಮೂರು ಕಾಂಡಗಳಲ್ಲಿ ಹೇಳಿಯಿರುವಂತೆಯೇ ಇಲ್ಲಿಯೂ ಹೇಳಬಹುದಾದಾಗ್ಯೂ ಮುಖ್ಯವಾಗಿ ಜಿಜ್ಞಾಸುಗಳಿಗೆ, ತ ಯಾಪ್ರಕರಣಕ್ಕೆ ತಕ್ಕವರ್ಗದ ಪದಗಳೆಲ್ಲವೂ ಒಂದೇಕಡೆ ಸಿಕ್ಕಿದರೆ ವಿ ಷ್ಟಪ್ರಯೋಜನವೋ ಅಷ್ಟುಪ್ರಯೋಜನವು ಇನ್ನಾವಬಗೆಯಿಂದಲೂ ಆಗದು. ಅದಕ್ಕಾಗಿಯೇ ಸಂಕರವನ್ನಾದರೂಅಂಗೀಕರಿಸಿ ಅದರನ್ನೂ ವರ್ಗಗಳಲ್ಲಿಯೇ ಸೇರಿಸಿದಾಗ್ಯೂ ಉಕ್ತವಲ್ಲದ್ದನ್ನೆಲ್ಲಿಯೂ ಹೇಳಲಿಲ್ಲವಾ ಗಿ, ಲಿಂಗನಿರ್ಣಯವು ನಿರ್ದುಷ್ಟವಾಯಿತು.

ಅವತಾರಿಕೆ॥ ಪೂರ್ವೋಕ್ತದೋಷಗಳನ್ನು ಪರಿಹರಿಸುವದಕ್ಕಾಗಿ, ವಿ ಶೇಷ ವಿಧಿಗಳನ್ನು ಹೇಳುತ್ತಾ ಬರುವದ್ದರಿಂದ ಗ್ರಂಥಗೌರವ ದೋಷ ವುದುಷ್ಪರಿಹಾರ್ಯ ವೆಂಬುವದಕ್ಕವಕಾಶ ವಿಲ್ಲದಂತೆ ಕೆಲವು ಲಘುಸಂಜ್ಞೆ ಗಳಂನು ಪರಿಭಾಷೆಯಾಗಿ ತಿಳಿಸುತ್ತಾನೆ.

ಮೂ॥ ತ್ರಿಲಿಂಗ್ಯಾಂ ತ್ರಿಷ್ವಿತಿ ಪದಂ ಮಿಥನೆ ತು ದ್ವಯೋರಿತಿ।
ನಿಷಿದ್ಧಲಿಂಗಂ ಶೇಷಾರ್ಥಂ ತ್ವಂತಾಥಾದಿನ ಪೂರ್ವಭಾಕ್॥೫॥

ಟೀ॥ ತ್ರಿಲಿಂಗ್ಯಾಂ=ಮೂರು ಲಿಂಗಗಳಲ್ಲಿಯೂ ಎಂದು ಹೇಳತಕ್ಕ ಸ್ಥಳದಲ್ಲಿ, ತ್ರಿಷ್ವಿತಿ ಪದಂ- (ತ್ರಿಷು) ಎಂಬುವಪದವೂ, ಮಿಥುನೇತು= ಸ್ತ್ರೀಲಿಂಗ ಪುಲ್ಲಿಂಗಗಳೆರಡರಲ್ಲಿಯೂ ಎಂದು ಹೇಳತಕ್ಕಸ್ಥಳದಲ್ಲಿ, ದ್ವಯೋರಿತಿ ಪದಂ=(ದ್ವಯೋಃ) ಯೆಂಬುವ ಪದವೂ ಹೇಳಲ್ಪಡುತ್ತೆ, ನಿ ಷಿದ್ಧಲಿಂಗಂ=ನಿಷೇಧಿಸಲ್ಪಟ್ಟಲಿಂಗವುಳ್ಳ ಪದವು, ಶೇಷಾರ್ಥಂ=ಉಳಿದಲಿಂ ಗವುಳ್ಳದ್ದು, ತ್ವಂತಾಥಾದಿ=ತ್ವಂತ= (ತು) ಎಂದು ಅವ್ಯಯವೇ ತುದಿ ಯಲ್ಲಿ ಕೂಡಿಸಿ ಪ್ರಯೋಗಿಸಲ್ಪಟ್ಟಪದವೂ, ಅಥಾದಿ=(ಅಥ) ಎಂಬು ವ ಅವ್ಯಯವೇ ಮೊದಲಿನಲ್ಲಿ ಸೇರಿಸಿ ಪ್ರಯೋಗಿಸಲ್ಪಟ್ಟಪದವೂ, ನಪೂ ರ್ವಭಾಕ್=ಕೆಳಗಣ ಪದಕ್ಕೆ ಸಂಬಂಧಸಿದ್ದಲ್ಲ ॥೫॥ ಉದಾಹರಣ॥ (ಆ ಶನಿರ್ದ್ವಯೋಃ) ಎಂಬಲ್ಲಿ ಆಶನಿಶಬ್ದ ಪುಂಸ್ತ್ರೀಲಿಂಗಗಳೆರಡರಲ್ಲಿಯೂ ವ ರ್ತಿಸುವದೆಂದು ಹೇಳುವದಕ್ಕೆ ಬದಲಾಗಿ, (ದ್ವಯೋಃ, ಎಂಬಸಂಕೇತವ ಮಾಡಲ್ಪಟ್ಟಿದೆ. (ದ್ವೀಪೋಸ್ತ್ರಿಯಾಂ) ಈಸ್ಥಳದಲ್ಲಿ ದ್ವೀಪಶಬ್ದವು ಪ ನ್ನಪುಂಸಕ ಲಿಂಗದ್ವಯದಲ್ಲಿಯೂ ವರ್ತಿಸುವದೆಂದು ಹೇಳುವದಕ್ಕೆ

CC-0. Jangamwadi Math Collection. Digitized by eGangotri

ದೆಲಾಗಿ, ಅಸ್ತ್ರಯೋಂಸ್ತ್ರೀಲಿಂಗದಲ್ಲಿ ವರ್ತಿಸುವದಿಲ್ಲವೆಂಬ ನಿಷೇಧಾರ್ಥಕನಚ್ ಘಟಿತಸಂಕೇತವನ್ನು ಮಾಡಿರುವದರಿಂದ, ನಿಷಿದ್ಧಸ್ತ್ರೀಲಿಂಗಕವಾದ ದ್ವೀಪಶಬ್ದವು ಶೇಷಲಿಂಗವೇ ಅರ್ಥ ಫುಳ್ಳದ್ದಾಯಿತು. ಅಂದರೆ ನಿಷೇಧಿಸದೇ ಮಿಕ್ಕುಳಿದ ಪುಂಸ್ತ್ರೀಲಿಂಗಗಳುಳ್ಳದ್ದೆಂಬರ್ಥವು ಹೇಳಲ್ಪಟ್ಟ ಹಾಗಾಯಿತು. ಮತ್ತು ದ್ವಿತ್ರಿಶಬ್ದಗಳು ಸಾಮಾನ್ಯತಃ ಸಂಖ್ಯಾವಾಚಕಗಲ್ಲಾದ್ದರಿಂದ ಸ್ತ್ರೀಲಿಂಗ ಪುಲಿಂಗಾದಿ ವಿಶೇಷವಾಚಕಗಳಿಲ್ಲದೇ ಇದ್ದರೂ ಅಮರಸಿಂಹನು ತನ್ನ ಗ್ರಂಥದಲ್ಲಿ ಲಿಂಗವಾಚಕವಾಗಿಯೇ ಪ್ರಯೋಗಿಸಿಯಿಧಾನೆ. ಅದು ಪಾರಿಭಾಷಿಕವಾಗಿರುವದು. (ಅರ್ಧರಾತ್ರನಿಶೀಥೌದ್ವೌ) ಎಂಬುವದು ಮುಂತಾದ ಸ್ಥಳದಲ್ಲಿ ದ್ವಿಶಬ್ದವು ಅರ್ಧರಾತ್ರ ನಿಶೀಥ ಶಬ್ದಗಳಿಗೆ ವಿಶೇಷಣವಾಗಿರುವದರಿಂದ ಲಿಂಗವಾಚಕವಲ್ಲ (ನಪೂರ್ವಭಾಕ್) ಅಂದರೆ ಪೂರ್ವಪದವನ್ನು ಹೊಂದಿದ್ದಲ್ಲ. ಇಲ್ಲಿ ಪೂರ್ವಭಾಕ್ತ್ವವಿಲ್ಲದ ಪದವು ಮೂರುಪ್ರಕಾರವಾಗಿರುವದು. ಹೇಗಂದರೆ,--ನಾಮಪದ, ಲಿಂಗಪದ, ಅರ್ಥಪದವೆಂದು *ಇದಕ್ಕೆ ನಿದರ್ಶನ* (ಶೋಭಾಕಾಂತಿದ್ಯುತಿಶ್ಛವಿಃ) (ಅವಶ್ಯಾಯಸ್ತು ನೀಹಾರಃ) ಇಲ್ಲಿ ತ್ವಾಂತವಾದ ಅವಶ್ಯಾಯಶಬ್ದವು ತನ್ನ ನಾಮವಾದ ನೀಹಾರ ಶಬ್ದಕ್ಕೆ ಪರ್ಯ್ಯಾಯ ವಾಗುವದೇ ಹೊರತು ಪೂರ್ವವಾದ ಶೋಭಾದಿಪದಗಳಿಗೆ ಸಂಬಂಧಿಸುವದಿಲ್ಲ. ಲಿಂಗಪದ ಹೇಗಂದರೆ, (ಅಂತರ್ಧಾವ್ಯವಧಾಪುಂಸಿ ತ್ವಂತರ್ಧಿಃ) ಇಲ್ಲಿ ಪುಂಸಿತು ಎಂಬುವ ತ್ವಾಂತವಾದ_ಲಿಂಗಪದವು ಉತ್ತರವಾದ ಅಂತರ್ಧಿಶಬ್ದವನ್ನು ಹೇಳುವದೇ ಹೊರತು-ಪೂರ್ವವಾದ, ಅಂತರ್ಧಾವ್ಯವಧಾಶಬ್ದಗಳನ್ನು ಜ್ಞಾಪಿಸುವದಿಲ್ಲ. ಅರ್ಥಪದ ಹೇಗಂದರೇ, (ಶಾಪಸ್ತ್ವಭಿಷಂಗಃ) ಇಲ್ಲಿ ತ್ವಾಂತವಾದ ಶಾಪಶಬ್ದವು ಉತ್ತರವಾದ ಅಭಿಷಂಗಶಬ್ದಕ್ಕೆ ಅರ್ಥವಾಗುವದೇ ಹೊರ್ತು ಪೂರ್ವವಾದ ಪ್ಲವಶಬ್ದಕ್ಕೆ ಸಂಬಧಿಸುವದಿಲ್ಲ. ಅಥಾದಿಯಾದ ನಾಮಪದ ಹೇಗಂದರೆ (ಪ್ರಾಲೇಯಂಮಿಹಿಕಾಚಾಥ ಹಿಮಾನೀಹಿಮಸಂಹತಿಃ) ಇಲ್ಲಿ ಅಥಾದಿಯಾದ ಹಿಮಾನೀ ಶಬ್ದವು ಉತ್ತರವಾದ ಹಿಮಸಂಹತಿಯನ್ನು ಹೇಳುವದೇ ಹೊರ್ತು, ಪೂರ್ವವಾದ ಪ್ರಾಲೇಯ ಮಿಹಿಕಾಶಬ್ದಗಳನ್ನು ಹೊಂದುವದಿಲ್ಲವು. ಅಥಾದಿಯಾದ ಲಿಂಗಪದ ಹೇಗಂದರೆ, ಭಾರ್ಯ್ಯಾಜಾಯಾಥಪುಂಭೂಮ್ನಿದಾರಾಃಇಲ್ಲಿ)ಅಥಾದಿಯಾದ(ಪುಂಭೂಮ್ನಿ)ಎಂಬುವಲಿಂಗಪದವು ಉತ್ತರವಾದ ದಾರಶಬ್ದವನ್ನು ಹೇಳುವದೇ ಹೊರತು ಪೂರ್ವವಾದ ಭಾ

CC-0. Jangamwadi Math Collection. Digitized by eGangotri

ಯೊರ್ಜಾಯಾಶಬ್ದಗಳನ್ನು ಹೇಳುವದಿಲ್ಲ. ಅಥಾದಿಯಾದ ಅರ್ಥಪದ ಹೇಗಂದರೆ.--ಏತಸ್ಯಕಲಿಕಾಗಂಧ ಫಲೀಸ್ಯಾದಥಕೇಸರೆ-ವಕುಳೊವಂಜು ಳಃ)ಇಲ್ಲಿ ಅಥಾದಿಯಾದ ಕೇಸರಶಬ್ದವುತನ್ನ ಅರ್ಥವನ್ನು ಉತ್ತರಗ ಳಾದ ವಕುಳ ವಂಜುಳ ಶಬ್ದಗಳಿಗೆ ಹೇಳುವದೇಹೊರತು, ಪೂರ್ವಗಳಾದ ಗಂಧಫಲ್ಯಾದಿಶಬ್ದಗಳನ್ನು ಹೊಂದುವದಿಲ್ಲ.

ವಿಶವ ವಿಚಾರವು * ತ್ವಂತವಾದ ನಾಮಪದಕ್ಕೆ ಮತೊಂತ್ತದು ವಿಶೇ ಷವಿದೆ ವನಂದರೆ, (ದಾರಾಸ್ಯಾತ್ತ್ರ ಕುಟುಂಬಿನೀ] ಎಂಬುವ ಸ್ಥಳದಲ್ಲಿ (ಸ್ಯಾತ್ತ್ರ)ಎಂಬುವ ತ್ವಂತವಾದ ಕ್ರಿಯಾಪದವು ಕ್ರಿಯಾಂತವಾದ ದಾ ರಶಬ್ದವನ್ನು ಆಕರ್ಷಿಸುವದರಿಂದ ಅದಾರಶಬ್ದಕ್ಕೆ ಪೂರ್ವಪದ ಸಂಬಂ ಧವನ್ನು ಹೇಳದೇ ಉತ್ತರವಾದ ಕುಟುಂಬಿನೀ ಪದದೊಡನೆ ಸಂಬಂಧ ವನ್ನು ತೋರಿಸುತ್ತದೆಯಾಗಿ,ದಾರಕುಟುಂಬಿನೀ ಶಬ್ದಗಳೆರಡೂ ಪತ್ನೀ ವಾಚಕಗಳಾದವು. ತ್ವಂತವಾದ ಲಿಂಗಪದಕ್ಕೆಮತೊಂದುವಿಶೇಷವಿದೆ ಅ ದೇನಂದರೆ, (ಘಸ್ರೊದಿನಾಹನೀವಾತುಕ್ಲೀಬೆದಿವಸವಾಸರೌ) ಇಲ್ಲಿತ್ವಂ ತವಾದ(ವಾ)ಎಂಬುವಶಬ್ದವು ಕ್ಲೀಬತ್ವವಿಶಿಷ್ಟವಾಗಿ ಪೂರ್ವಗಳಾದ ದಿ ನಾಹಶ್ಶಬ್ದಗಳನ್ನು ಹೇಳದೇ ಉತ್ತರಗಳಾದ ದಿವಸವಾಸರಗಳಿಗೆ ವಿಧಾ ಯಕವಾಯಿತು ‖ಮತ್ತು ‖ (ಅಥ) ಎಂಬುವ ಶಬ್ದಕ್ಕೆ ಪರ್ಯಾಯವಾ ದ (ಅಥೋ) ಎಂಬವದು, ಆದಿಯೊಳಗುಳ್ಳ ಶಬ್ದವೂ ಸಹ ಪೂರ್ವಪದ ದೊಡನೆ ಸಂಬಂಧಿಸುವದಿಲ್ಲ. ‖ ಉದಾಹರಣ ‖ ಅನುಕ್ರೋಶೋ ಪ್ಯಥೋಹನಃ (ಪೂತಿಃಥಾನಮಥೊರ್ದುಮಃ) ಇತ್ಯಾದಿ*ಸ್ಥಳಗ ಳಲ್ಲಿಅಥೋಶಬ್ದಾದಿಯಾದ ಪದವು ಪೂರ್ವಭಾಕ್ಕಲ್ಲವು. ಮತ್ತು ಪುಂ ಸ್ಯೇವಾಂಧುಃಪ್ರಹಿಃಕೂಪ ಉದಪಾನಂತುಪುಂಸಿವಾ) ಎಂಬುವಕಡೆ, ತುಶಬ್ದವು ಪೂರ್ವವಾದ ಅಂಧುಪ್ರಹಿಕೂಪ ಶಬ್ದಗಳಿಗೆ ವಿಧಿಸಲ್ಪಟ್ಟದ್ದ ಪುಲ್ಲಿಂಗತ್ವವನ್ನು ಉದಪಾನಶಬ್ದಕ್ಕೆ ನಿಷೇಧಿಸುತ್ತದೆ. (ಉದಪಾನಂ) ಎಂಬುವ ಕಡೆಪ್ರಥವ್ಯೇಕವಚನ ಹ್ರಸ್ವಾನುಸ್ವಾರರೂಪ ಭೇದದಿಂದ ಲೇ ನಪುಂಸಕತ್ವಸಿದ್ಧಿ ಯಾದ್ದರಿಂದ ಪುಲ್ಲಿಂಗತ್ವವು ನಿಷಿದ್ಧವಾಗುತ್ತಿರು ವಲ್ಲಿ ಅಂದಕ್ಕೋಸ್ಕರ ತುಶಬ್ದಪ್ರಯೋಗವು ನಿರರ್ಥಕವೆಂಬ ಶಂಕೆ ಬಂ ದರೆ (ಸಿದ್ಧೇಸತ್ಯಾರಂಭೊ ನಿಯಮಾರ್ಥಃ) ಎಂಬುವನ್ಯಾಯದಿಂದ ಅದು ನಿಯಮವೇ ಪ್ರಯೋಜನವುಳ್ಳದ್ದಾಗುತ್ತ.ಅಂಥಾನಿಯಮ ವೇನಂದರೆ

CC-0. Jangamwadi Math Collection. Digitized by eGangotri

ಉದಪಾನಶಬ್ದವು ಪೂರ್ವಪದದೊಡನೆಸಂಬಂಧಿಸುವದಿಲ್ಲ. (ಪುಂಸಿವಾ) ಎಂಬುವ ಉತ್ತರಪದಕ್ಕೇ ಸಂಬಂಧಿಸುವದು. ಕೂಪಶಬ್ದವಾದರೋ (ಪುಂಸ್ಯೇವ) ಎಂಬದಾಗಿ ಪುಲಿಂಗ ಮಾತ್ರಕತ್ವವನ್ನು ಹೊಂದುತ್ತೆ. ಈಮೇರೆ ನಪುಂಸಕವಾದ ಉದಪಾನ ಶಬ್ದವು ವಾಕ್ಯಾದಿಂದ ವ್ಯತಿಕ್ತವಾದ ಪುಲ್ಲಿಂಗತ್ವವನ್ನು ಹೊಂದುತ್ತೆ. ಈಮೇರೆ ಅಮರಕೋಶದೊಳಗೆಲ್ಲ ಲಕ್ಷ್ಯಲಕ್ಷಣ ಸಮನ್ವಯವನ್ನು ಕ್ರಮವಿಚಾರದಿಂದ ಬುದ್ಧಿವಂತರು ಪಡೆಯ ಬಹುದು.ಮತ್ತು ಶಬ್ದಸ್ವರೂಪವು ತಿಳಿಯಲ್ಪಡುತ್ತದೆ. ವಚನಜ್ಞಾನಾರ್ಥವಾಗಿ ಯಾವಶಬ್ದಗಳಿಗೆ ನಿತ್ಯ ಬಹುವಚನತ್ವವಿರುತ್ತದೆಯೋ ಅಂತವುಗಳಿಗೆ (ಅಪಃಸ್ತ್ರೀಭೂಮ್ನಿ-ಲಾಜಾಃಪುಂಭೂಮ್ನಿ) ಈ ಮೇರೆ ಭೂಮ್ನಿಯೆಂಬದಾಗಿ ಹೇಳಲ್ಪಟ್ಟಿರುತ್ತದೆ.

ಇತ್ಯುಪೋದ್ಘಾತಪ್ರಕರಣಂ.

ಅಮರಕೋಶಸ್ಥಿತಿಕ್ರಮವು.

ಈ ಕೋಶದೊಳಗೆ ಮೂರು ಲೋಕಗಳೊಳಗೂ ಮುಖ್ಯಗಳಾಗಿಯೂ ಪ್ರಯೋಜಕಗಳಾಗಿಯೂ ಇರುವ ಪದಾರ್ಥಗಳನ್ನೆಲ್ಲ ಜಿಜ್ಞಾಸುಗಳಿಗೆ ಸುಲಭವಾಗಿ ಸಿಕ್ಕುವಂತೆಯು, ಪ್ರಯೋಗಜ್ಞಾನವುಂಟಾಗುವಂತೆಯುತಿಳಿಸಬೇಕಾಗಿ ದೇವಸಂಬಧ ಮುಖ್ಯವಾಗಿರುವವುಗಳನ್ನು ಪ್ರಾಯಿಕವಾಗಿ ಪ್ರಥಮಕಾಂಡದೊಳಗೂ, ಭೂಲೋಕಸಂಬಂಧ ಮುಖ್ಯಗಳಾಗಿಯೂಮನುಜ ಪಶ್ವಾದಿ ಸಂಬಂಧ ಮುಖ್ಯಪ್ರಧಾನಗಳಾಗಿಯೂ ಇರುವವುಗಳನ್ನೇಪ್ರಾಯಿಕವಾಗಿ ದ್ವಿತೀಯ ಕಾಂಡದೊಳಗೂ, ಉಭಯ ಸಾಧಾರಣಗಳಾಗಿಯೂ, ಭಾಷಾ ಜ್ಞಾನಕ್ಕೆ ಮುಖ್ಯೋಪಯೋಗಿಗಳಾಗಿಯೂ ಇರುವವುಗಳನ್ನೇ ಪ್ರಾಯಿಕವಾಗಿ ತೃತೀಯ ಕಾಂಡದೊಳಗೂ ಹೇಳಿ ಇರುತ್ತಾನೆ. ಮೂರುಕಾಂಡದೊಳಗೂ (೨೫) ವರ್ಗಗಳು. ಮೊದಲನೇದು ಸ್ವರ್ಗವರ್ಗ. ಇದರಲ್ಲಿ ಸ್ವರ್ಗಲೋಕ, ಬ್ರಹ್ಮಾದಿದೇವತೆಗಳು, ಅವರ ಪರಿವಾರಾದಿಗಳು. ಎರಡನೇ ವ್ಯೋಮವರ್ಗದಲ್ಲಿ ಆಕಾಶವೂ. ಮೂರನೇ ದಿಗ್ವರ್ಗದಲ್ಲಿ ದಿಕ್ಕುಗಳು. ಖಗೋಳ ನಕ್ಷತ್ರಗ್ರಹಾದಿ ನಾಲ್ಕನೇ ಕಾಲವರ್ಗದಲ್ಲಿ ಕಾಲ, ಸಾಮಾನ್ಯ, ವಿಶೇಷ, ಕಾರ್ಯ, ಕಾರಣಾ

CC-0. Jangamwadi Math Collection. Digitized by eGangotri

ದಿಗಳೂ. ಐದನೇ ಧೀವರ್ಗದಲ್ಲಿ ಬುದ್ಧಿ, ಸಂಶಯ, ನಿಶ್ಚಯ, ವೃತ್ತಿ, ಶಾಸ್ತ್ರ, ಗುಣ, ಇಂದ್ರಿಯ ವಿಷಯಾದಿಗಳೂ. ಆರನೇ ವಾಗ್ವರ್ಗದಲ್ಲಿ ಭಾಷೆ, ಶಬ್ದ, ವೇದ, ಸ್ವರ, ಗ್ರಂಥ, ವೃತ್ತಾಂತ, ಹೆಸರು, ವ್ಯವಹಾರ, ಪ್ರಯೋಗ, ವಾಗ್ವ್ಯತ್ಯಾದಿಗಳೂ. ಏಳನೇ ಶಬ್ದಾದಿವರ್ಗದಲ್ಲಿ ಧ್ವನಿ ನಾದಾದಿಗಳು. ಎಂಟುನೆ ನಾಟ್ಯವರ್ಗದಲ್ಲಿ ತಂತ್ರ್ಯಾದಿ ನಾನಾವಾದ್ಯ ನಟ ನರ್ತಕೀಚೇಷ್ಟಾಭಾವ ಗಾನಸ್ತ್ರೀವಿಲಾಸರಸಾದಿಗಳೂ. ಒಂಭತ್ತನೇ ಪಾತಾಳವರ್ಗದಲ್ಲಿ ಅಧೋಲೋಕಾದಿಗಳೂ. ಹತ್ತನೇಭೋಗಿವರ್ಗದಲ್ಲಿ ಸರ್ಪವಿಷವೈದ್ಯಾದಿಗಳೂ. ಹನ್ನೊಂದನೇ ನರಕವರ್ಗದಲ್ಲಿ ದುರ್ಗತಿ ಯಾತನಾದಿಗಳೂ. ಹನ್ನೆರಡನೇ ವಾರಿವರ್ಗದಲ್ಲಿ ಸಮುದ್ರ, ಹಡಗು, ಜಲದಿ ಹುಟ್ಟುವ ಜಂತುಗಳೂ, ನದಿಮುಂತಾದವು. ಈ ಮೇರೆ ಮೊದಲನೇಕಾಂಡದಲ್ಲಿಯೂ ಎರಡನೇ ಕಾಂಡದೊಳಗೆ ಮೊದಲನೇಭೂವರ್ಗದಲ್ಲಿ ಭೂಮಿಗಳು ಮಾರ್ಗಗಳು ಮುಂತಾದ ದೇಶಪರಿಣಾಮಾದಿಗಳೂ. ಎರಡನೇ ಪುರ ವರ್ಗದಲ್ಲಿ ನಗರ ಗ್ರಾಮಾದಿಗಳೂ. ಗೃಹಾರಾಮಸ್ಥಾನಾದಿಗಳೂ. ಮೂರನೇ ಶೈಲವರ್ಗದಲ್ಲಿ ಬೆಟ್ಟಗಳು, ಗುಟ್ಟಗಳು, ಕಲ್ಲುಗಳು ಮುಂತಾದವುಗಳೂ. ನಾಲ್ಕನೇ ವನೌಷಧಿ ವರ್ಗದಲ್ಲಿ ಕಾಡು, ಗಿಡ, ಮೂಲಿಕೆಮುಂತಾದವುಗಳೂ, ಐದನೇ ಸಿಂಹಾದಿವರ್ಗದಲ್ಲಿ ಆರಣ್ಯಕ, ಗ್ರಾಮ್ಯ, ಮೃಗ, ಪಶುಪ್ರಭೃತಿಗಳೂ. ಆರನೇ ಮನುಷ್ಯವರ್ಗದಲ್ಲಿ ಮನುಷ್ಯರು, ಪುರುಷ, ಸ್ತ್ರೀ, ಬಂಧುಗಳು, ವಯೋಭೇದ, ಅವಸ್ಥೆ, ಆಕಾರ, ಅವಯವ, ಶಾರೀರಕ, ಧಾತು, ಪ್ರಕೃತಿ, ವಿಕೃತಿ, ಮನುಷ್ಯರ ಉಪಯೋಗಕ್ಕೆ ಮುಖ್ಯವಾಗಿ ಬಳಸಲ್ಪಡುವ ವಸ್ತುಗಳು. ಮುಂತಾದವು. ಏಳನೇ ಬ್ರಹ್ಮವರ್ಗದಲ್ಲಿ ಕುಲ, ಜಾತಿ, ಮತ, ವೈದಿಕ, ಯಜ್ಞಸಂಭಾರಕ್ರಿಯೆ ಆಚಾರ, ವಿದ್ಯೆ, ವರ್ಣಾಶ್ರಮವೃತ್ತಿ ಮುಂತಾದವುಗಳೂ ಎಂಟನೇ ಕ್ಷತ್ರಿಯವರ್ಗದಲ್ಲಿ ಅರಸುಗಳು, ರಾಜ್ಯ, ರಾಜ್ಯಾಂಗ, ಆಳ್ವಿಕೆ, ತಂತ್ರ, ಲೌಕಿಕ ಆಯುಧ ನ್ಯಾಯಸ್ಥಳ, ವಸ್ತುರೀತಿ ಮುಂತಾದವುಗಳೂ, ಒಂಭತ್ತನೇ ವೈಶ್ಯವರ್ಗದಲ್ಲಿ ವರ್ತಕರು ವ್ಯಾಪಾರ, ಅಂಗಡಿ ಮಾರಲ್ಪಡುವ ದಿನಸುಗಳು, ಲೆಕ್ಕ, ಗೊತ್ತು, ಸಂಕೇತ ಮುಂತಾದವುಗಳೂ, ಹತ್ತನೇ ಶೂದ್ರವರ್ಗದಲ್ಲಿ ಶೂದ್ರರು, ಸೇವೆ, ಶಿಲ್ಪಿ, ಕೃಷಿ, ಬೆಳೆ ಅದರ ಸಾಮಾನು ಮುಂತಾದವುಗಳು. ಮೂರನೇ ಕಾಂಡದೊಳಗೆ ಮೊದಲನೇ ವಿಶೇಷ್ಯ

ಘ್ನ ವರ್ಗದಲ್ಲಿ ಗುಣವಾಚಕ ದ್ರವ್ಯವಾಚಕ ಕ್ರಿಯಾವಾಚಕ ವಿಶೇಷ್ಯನಿಘ್ನ ಪದಗಳೂ ಎರಡನೇ ಸಂಕೀರ್ಣವರ್ಗದಲ್ಲಿ ಕ್ರಮಾದಿ ಭಾವವಚನ ಶಬ್ದಗಳೂ ಅಪರಸ್ಪರಾದಿ ವಿಶೇಷ್ಯನಿಘ್ನ ಪದಗಳೂ, ಪಾರಾಯಣಾದಿ ನಿಯಮಿತಲಿಂಗ ಶಬ್ದಗಳೂ, ಸ್ತಂಭಘ್ನಾದಿ ಪ್ರಕರಣಶಬ್ದಗಳು, ಅಪೂಪಿಕಾದಿ ಸಮೂಹ ವಚನಶಬ್ದಗಳು, ಈ ಮೇರೆ ಲಿಂಗಸಂಕೀರ್ಣಗಳನ್ನು ಕ್ರಮವಿಲ್ಲದೆಯೂ ಮೂರನೇ ನಾನಾರ್ಥವರ್ಗದಲ್ಲಿ ಅನೇಕಾರ್ಥಗಳುಳ್ಳ ಕಾಂತಖಾಂತಾದಿ ಶಬ್ದಗಳೂ ಬಹ್ವರ್ಥಕಾವ್ಯಯಗಳೂ. ನಾಲ್ಕನೇ ಅವ್ಯಯ ವರ್ಗದಲ್ಲಿ ಲಿಂಗವಚನಾದಿಗಳಿಲ್ಲದೆ ಏಕರೂಪವಾಗಿರುವ ಅವ್ಯಯಗಳು ಐದನೇಲಿಂಗಾದಿ ಸಂಗ್ರಹವರ್ಗದಲ್ಲಿ ಲಿಂಗ ಸಂಗ್ರಹ ಸಮಾಸ ಸಂಗ್ರಹ ಸೂತ್ರನಿಯಮಾದಿಗಳೂ ಹೇಳಲ್ಪಟ್ಟಿರುತ್ತವೆಯಾಗಿ, ಸಂಸ್ಕೃತಭಾಷಾಸರ್ವಸ್ವ ಸಂಗ್ರಹರೂಪವಾಗಿಯೂ ಮಿತವಾಗಿಯೂ ಶುದ್ಧವಾಗಿಯೂ ಸುಲಭವಾಗಿಯೂ ಪ್ರಯೋಜನವಾಗಿಯೂ ಇರುವ ಈ ಕೋಶವು ೧೪೯೬ ಶ್ಲೋಕಗಳಿಂದೊಡಗೂಡಿ ಅಮರಸಿಂಹನೆಂಬ ಕವಿಯಿಂದ ರಚಿಸಲ್ಪಟ್ಟುಯಿದೆ. ಲಿಂಗಾಭಟ್ಟೀಯ, ಗುರುಬಾಲ ಪ್ರಬೋಧಿಕೆ. ಮುಂತಾದ ಬಹುವ್ಯಾಖ್ಯಾನಗಳುಂಟಾಗಿ ಪ್ರಾಮಾಣಿಕವೆಂದು ಪಂಡಿತರಿಂದ ಮುಖ್ಯವಾಗಿ ಅಂಗೀಕರಿಸಲ್ಪಟ್ಟಿದೆ.

CC-0. Jangamwadi Math Collection. Digitized by eGangotri

ಸ್ವರವ್ಯಯಂ ಸ್ವರ್ಗನಾಕ ತ್ರಿದಿವತ್ರಿದಶಾಲಯಾಃ। ಸುರಲೋಕೋದ್ಯೋದಿವೌದ್ವೇಸ್ತ್ರಿಯಾಂಕ್ಲೀಬೇತ್ರಿವಿಷ್ಟಪಂ॥೬

ಅಮರಾ ನಿರ್ಜ್ಜರಾ ದೇವಾಸ್ತ್ರಿದಶಾವಿಬುಧಾಸ್ಸುರಾಃ। ಸುಪರ್ವಾಣಸ್ಸುಮನಸಸ್ತ್ರಿದಿವೇಶಾದಿವೌಕಸಃ॥೭॥ ಆದಿತೇಯಾ ದಿವಿಷದೋಲೇಖಾಅದಿತಿನಂದನಾಃ॥ ಆದಿತ್ಯಾಋಭವೋಸ್ವಪ್ನಾ ಅಮರ್ತ್ಯಾಅಮೃತಾಂಧಸಃ ॥೮॥ ಬರ್ಹಿರ್ಮುಖಾಃಕ್ರತುಭುಜೋಗೀರ್ವಾಣಾದಾನವಾರಯಃ। ಬೃಂದಾರಕಾದೈವತಾನಿಪುಂಸಿವಾದೇವತಾಸ್ತ್ರಿಯಾಂ ॥೯॥

ಸ್ವರ್‌-ಸ್ವಃ-ಅವ್ಯಯವು-ಸ್ವರ್ಗಃ -ನಾಕಃ-ತ್ರಿದಿವಃ-ತ್ರಿದಶಾಲಯಃ--ಸುರಲೋಕಃ_ಪು-ದ್ಯೌಃ-ಓ-ದ್ಯೌ-ಪ_ಸ್ತ್ರೀ-ತ್ರಿವಿಷ್ಟಪಂ-ನ_ನ ಸ್ವರ್ಗಲೋಕದ ಹೆಸರುಗಳು.

ಅಮರಾಃ- ನಿರ್ಜ್ಜರಾಃ--ದೇವಾಃ-ತ್ರಿದಶಾಃ=ವಿಬುಧಾಃ-ಸುರಾಃ=ಸುಪರ್ವಾಣಃ=ಣ್-ಸುಮನಸಃ-ಸ್-ತ್ರಿದಿವೇಶಾಃ-ದಿವೌಕಸಃ=ಸ್=ಆದಿತೇಯಾಃ=ನಿವಿಷದಃ=ದ್-ಲೇಖಾಃ=ಅದಿತಿನಂದನಾಃ=ಆದಿತ್ಯಾಃ=ಋಭವಃ-ಉ=ಅಸ್ವಪ್ನಾಃ=ಅಮರ್ತ್ಯಾಃ-ಅಮೃತಾಂಧಸಃ=ಸ್=ಬರ್ಹಿರ್ಮುಖಾಃ=ಕ್ರತುಭುಜಃ--ಜ್=ಗೀರ್ವಾಣಾಃ=ದಾನವಾರಯಃ=ಇ=ಬೃಂದಾರಕಾಃ=೨೮=ಪು-ದೈವತಾನಿ_ನ=ದೇವತಾಃ=ಸ್ತ್ರೀ=೩=೩೦= ದೇವತೆಗಳ ಹೆಸರುಗಳು. ಈ ದೇವತಾಪರ್ಯಾಯಪದಗಳು- ಪ್ರಯೋಗದಲ್ಲಿ ಬಹುವಚನವೇ ಬಹಳ ಬಳಿಗೆಯಾಗಿರುವದ್ದರಿಂದ ಇಲ್ಲಿ ಬಹುವಚನಗಳೇಹೇಳಲ್ಪಟಿವೆ.

ಆದಿತ್ಯವಿಶ್ವವಸವಸ್ತುಷಿತಾಭಾಸ್ವರಾನಿಲಾಃ। ಮಹಾರಾಜಿಕಸಾಧ್ಯಾಶ್ಚ ರುದ್ರಾಶ್ಚ ಗಣದೇವತಾಃ ೧೦॥

ಆದಿತ್ಯಾಃ=ವಿಶ್ವೇ-ಅ=ವಸವಃ-ಉ-ತುಷಿತಾಃ=ಅ= ಭಾಸ್ವರಾಃ= ಅನಿಲಾಃ =ಮಹಾರಾಜಿಕಾಃ=ಸಾಧ್ಯಾಃ=ರುದ್ರಾಃ=ಪು=೬=(ಗಣದೇವತಾಃ) ಗಣದೇವತೆಗಳ ಹೆಸರುಗಳು.

ವಿದ್ಯಾಧರೋಪ್ಸರೋಯಕ್ಷರಕ್ಷೋಗಂಧರ್ವಕಿನ್ನರಾಃ। ಪಿಶಾಚೋ ಗುಹ್ಯಕಸ್ಸಿದ್ಧೋಭೂತೋಮೀದೇವಯೋನಯಃ॥

ವಿದ್ಯಾಧರಃ=ಪು=ಅಪ್ಸರಾಃ-ಸ್=ಯಕ್ಷಃ=ಪು=ರಕ್ಷಃ=ಸ್=ನ =ಗಂಧರ್ವಃ-ಕಿನ್ನರಃ=ಪಿಶಾಚಃ=ಗುಹ್ಯಕಃ-ಸಿದ್ಧಃ-ಭೂತಃ-ಪು=೧೦=ಅಮೀ=ಇವರು. ದೇವಯೋ

CC-0. Jangamwadi Math Collection. Digitized by eGangotri

ನಯಃ=ದೇವತೆಗಳೇ ಉತ್ಪತ್ತಿಸ್ಥಾನವಾಗಿ ಉಳ್ಳವರು.

ಅಸುರಾದೈತ್ಯದೈತೇಯದನುಜೇಂದ್ರಾರಿದಾನವಾಃ। ಶುಕ್ರಶಿಷ್ಯಾದಿತಿಸುತಾಃಪೂರ್ವದೇವಾಸ್ಸುರದ್ವಿಷಃ ॥೧೨॥

ಅಸುರಾಃ=ದೈತ್ಯಾಃ =ದೈತೇಯಾಃ=ದನುಜಾಃ=ಅ= ಇಂದ್ರಾರಯಃ- ಇ=ದಾನವಾಃ=ಶುಕ್ರಶಿಷ್ಯಾಃ=ದಿತಿಸುತಾಃ-ಪೂರ್ವದೇವಾಃ-ಸುರದ್ವಿಷಃ-ಪು-ಬ-೧೦-ಅಸುರರೆಂಬ ದೈತ್ಯರ ಹೆಸರುಗಳು.

ಸರ್ವಜ್ಞಸ್ಸುಗತೋಬುದ್ಧೋಧರ್ಮರಾಜಸ್ತಥಾಗತಃ। ಸಮಂತಭದ್ರೋಭಗವಾನ್ಮಾರಜಿಲ್ಲೋಕಜಿಜ್ಜಿನಃ ೧೩॥ಷಡಭಿಜ್ಞೋದಶಬಲೋದ್ವಯವಾದೀವಿನಾಯಕಃ। ಮುನೀಂದ್ರಶ್ಶ್ರೀಘನಶ್ಶಾಸ್ತಾ ಮುನಿಶ್ಶಾಕ್ಯ ಮುನಿಸ್ತು ಯಃ॥೧೪॥

ಸರ್ವಜ್ಞಃ-ಸುಗತಃ-ಬುದ್ಧಃ-ಧರ್ಮರಾಜಃ-ತಥಾಗತಃ- ಸಮಂತಭದ್ರಃ=ಭಗವಾನ್=ತ್-ಮಾರಜಿತ್ ಲೋಕಜಿತ್-ತ್-ಜಿನಃ-ಷಡಭಿಜ್ಞಃ-ದಶಬಲಃ=ಅದ್ವಯವಾದೀ=ನ್=ವಿನಾಯಕಃ=ಮುನೀಂದ್ರಃ=ಶ್ರೀಘನಃ=ಶಾಸ್ತಾ=ಋ=ಮುನಿಃ=ಪು=೧೮=ಬುದ್ಧದೇವರ ಹೆಸರುಗಳು.

ಸಶಾಕ್ಯಸಿಂಹಸ್ಸರ್ವಾರ್ಥಸಿದ್ಧಶ್ಶೌದ್ಧೋದನಿಶ್ಚಸಃ। ಗೌತಮಶ್ಚಾರ್ಕಬಂಧುಶ್ಚ ಮಾಯಾದೇವೀಸುತಶ್ಚಸಃ ॥

ಸಶಾಕ್ಯಸಿಂಹಃ= ಸರ್ವಾರ್ಥಸಿದ್ಧಃ=ಶೌದ್ಧೋದನಿಃ-ಇ-ಗೌತಮಃ-ಅರ್ಕಬಂಧುಃ-ಉ=ಮಾಯಾದೇವೀಸುತಃ=ಪು=೬-ಯಃ-ಶಾಕ್ಯಮುನಿಃಸಃ-ಶಾಕ್ಯರಿಗೆ ಯಾರು ಪೂಜ್ಯನೋ ಅಂತಾ ಬುದ್ಧದೇವರ ಹೆಸರು. ಇಲ್ಲಿ (ಅದ್ವಯವಾದೀ) ಅಂದರೆ, ಅದ್ವೈತವೇದಾಂತೀ ಅಲ್ಲ. ಬೌದ್ಧರಲ್ಲಿ ಕ್ಷಣಿಕವಿಜ್ಞಾನದ್ವೈತವಾದಿಯೊಬ್ಬನುಂಟು.

ಬ್ರಹ್ಮಾತ್ಮಭೂಸ್ಸುರಜ್ಯೇಷ್ಠಃಪರಮೇಷ್ಠೀಪಿತಾಮಹಃ ಹಿರಣ್ಯಗರ್ಭೋಲೋಕೇಶಸ್ಸ್ವ

ಬ್ರಹ್ಮಾ=ನ್=ಆತ್ಮಭೂಃ=ಊ_ಸುರಜ್ಯೇಷ್ಠಃ-ಪರಮೇಷ್ಠೀ=ನ್-ಪಿತಾಮಹಃ-ಹಿರಣ್ಯಗರ್ಭಃ=ಲೋಕೇಶಃ=ಸ್ವಯಂಭೂಃ

CC-0. Jangamwadi Math Collection. Digitized by eGangotri

ಯಂಭೂಶ್ಚತುರಾನನಃ ||
ಧಾತಾಬ್ಜಯೋನಿದ್ರುಹಿ
ಣೋವಿರಿಂಚಿಃಕಮಲಾಸನಃ|
ಸ್ರಷ್ಟಾಪ್ರಜಾಪತಿರ್ವೇಧಾವಿ
ಧಾತಾ ವಿಶ್ವಸೃಡ್ವಿಧಿಃ ||೧೭||
ಶತಾನಂದಃ ಶತಧೃತಿ ರ್ವಿರಿಂ
ಚೋಽಜೋವಿರಿಂಚನಃ|

ಊ=ಚತುರಾನನಃ=ಧಾತಾ=ಯ-ಅಬ್ಜ
ಯೋನಿಃ=ದ್ರುಹಿಣಃ ವಿರಿಂಚಿಃ =ಇ=ಕಮ
ಲಾಸನಃ- ಸ್ರಷ್ಟಾ =ಋ=ಪ್ರಜಾಪತಿಃ=
ಇ=ವೇಧಾಃ=ಸ್=ವಿಧಾತಾ=ಋ=ವಿಶ್ವಸೃ
ಟ್=ಜ್=ವಿಧಿಃ=ಪು=ಂ=ಬ್ರಹ್ಮನ ಹೆಸ
ರುಗಳು. ಮತ್ತು=ಶತಾನಂದಃ=ಶತಧೃ
ತಿಃ=ವಿರಿಂಚಃ=ಅಜಃ=ವಿರಿಂಚನಃ=ಪು=೫
=ಬ್ರಹ್ಮನಾಮಗಳು.

ವಿಷ್ಣುರ್ನಾರಾಯಣಃಕೃ
ಷ್ಣೋವೈಕುಂಠೋವಿಷ್ಟರಶ್ರ
ವಾಃ ದಾಮೋದರೋಹೃಷೀಕೇ
ಶಃ ಕೇಶವೋ ಮಾಧವಸ್ಸ್ವ
ಭೂಃ ||೧೮||
ದೈತ್ಯಾರಿಃ ಪುಂಡರೀಕಾಕ್ಷೋ
ಗೋವಿಂದೋ ಗರುಡಧ್ವಜಃ |
ಪೀತಾಂಬರೋಽಚ್ಯುತಶಾರ್ಙ್ಗೀ
ವಿಷ್ವಕ್ಸೇನೋಜನಾರ್ದನಃ||
ಉಪೇಂದ್ರಇಂದ್ರಾವರಜಶ್ಚ
ಕ್ರಪಾಣಿಶ್ಚತು
ರ್ಭುಜಃ| ಪದ್ಮನಾಭೋಮಧು
ರಿಪುರ್ವಾಸುದೇವ ಸ್ತ್ರಿವಿಕ್ರ
ಮಃ || ದೇವಕೀನಂದನಶ್ಶೌ
ರಿ ಶ್ರೀಪತಿಃಪುರುಷೋತ್ತ
ಮಃ | ವನಮಾಲೀಬಲಿಧ್ವಂ
ಸೀಕಂಸಾರಾತಿರಧೋಕ್ಷಜಃ||
ವಿಶ್ವಂಭರಃಕೈಟಭಜಿದ್ವಿಧು
ಶ್ರೀವತ್ಸಲಾಂಛನಃ | ಗದಾ
ಗ್ರಜೋಮುಂಜಿಕೇ ಶೋದಾ

ವಿಷ್ಣುಃ=ಉ-ನಾರಾಯಣಃ-ಕೃಷ್ಣಃ-
ವೈಕುಂಠಃ- ವಿಷ್ಟರಶ್ರವಾಃ=ಸ್=ದಾ
ಮೋದರಃ=ಹೃಷೀಕೇಶಃ-ಕೇಶವಃ-ಮಾಧ
ವಃ-ಸ್ವಭೂಃ-ಊ-ದೈತ್ಯಾರಿಃ-ಇ-ಪುಂಡ
ರೀಕಾಕ್ಷಃ=ಗೋವಿಂದಃ=ಗರುಡಧ್ವಜಃ=ಪೀ
ತಾಂಬರಃ-ಅಚ್ಯುತಃ-ಶಾರ್ಙ್ಗೀ-ನ್-ವಿಷ್ವ
ಕ್ಸೇನಃ-ಜನಾರ್ದನಃಉಪೇಂದ್ರಃ-ಇಂದ್ರಾ
ವರಜಃ-ಚಕ್ರಪಾಣಿಃ=ಇ-ಚತುರ್ಭುಜಃ
=ಪದ್ಮನಾಭಃ-ಮಧುರಿಪುಃ-ಉ-ವಾಸುದೇ
ವಃ=ತ್ರಿವಿಕ್ರಮಃ=ದೇವಕೀನಂದನಃ=ಶೌ
ರಿಃ=ಇ=ಶ್ರೀಪತಿಃ- ಪುರುಷೋತ್ತಮಃ=ವ
ನಮಾಲೀ=ನ್= ಬಲಿಧ್ವಂಸೀ=ನ್=ಕಂಸಾ
ರಾತಿಃ=ಇ==ಅಧೋಕ್ಷಜಃ=ವಿಶ್ವಂಭರಃ=
ಕೈಟಭಜಿತ್=ತ್=ವಿಧುಃ= ಶ್ರೀವತ್ಸಲಾಂ
ಛನಃ=ಪು= ೩೯=ವಿಷ್ಣುದೇವರ ಹೆಸರುಗ
ಳು. ಮತ್ತು, ಗದಾಗ್ರಜಃ=ಮುಂಜಿಕೇ
ಶಃ=ದಾಶಾರ್ಹಃ= ದಶರೂಪಭೃತ್=ತ್-
೪-ಪುಲ್ಲಿಂ=ವಿಷ್ಣುವಿನ ಹೆಸರುಗಳೆಂತಲೂ
ಅಧಿಕವಾಗಿ ಹೇಳುವರು. ಮತ್ತು, ಕೋ
ಶಾಂತರಗಳಲ್ಲಿ ಇನ್ನೂ ಅನೇಕನಾಮಗ

CC-0. Jangamwadi Math Collection. Digitized by eGangotri

ಶಾರ್ಙ್ಗೋದಶರೂಪಭೃತ್ ॥

ಳುರೂಢಿಯಾಗಿ ಹೇಳಲ್ಪಟ್ಟವೆ.

ವಸುದೇವೋಸ್ಯಜನಕಸ್ಸ ಏವಾನಕದುಂದುಭಿಃ ॥೨೩॥

ವಸುದೇವಃ-ಆನಕದುಂದುಭಿಃ=೨=ವು=ಅಸ್ಯಜನಕಃ=ಈ ಕೃಷ್ಣರೂಪನಾದ ವಿಷ್ಣುವಿನ ತಂದೆಯ ಹೆಸರುಗಳು.

ಬಲಭದ್ರಃಪ್ರಲಂಬಘ್ನೋ ಬಲದೇವೋಚ್ಯುತಾಗಜಃ। ರೇವತೀರಮಣೋರಾಮಃಕಾಮಪಾಲೋಹಲಾಯುಧಃ ॥ ಸಿಲಾಂಬರೋರೌಹಿಣೇಯಸ್ತಾಲಾಂಕೋ ಮುಸಲೀಹಲೀ । ಸಂಕರ್ಷಣಸ್ಸೀರಪಾಣಿಃಕಾಳಿಂದೀ ಭೇದನೋಬಲಃ ॥

ಬಲಭದ್ರಃ=ಪ್ರಲಂಬಘ್ನಃ=ಬಲದೇವಃ=ಅಚ್ಯುತಾಗ್ರಜಃ= ರೇವತೀರಮಣಃ=ರಾಮಃ=ಕಾಮಪಾಲಃ==ಹಲಾಯುಧಃ=ಸೀಲಾಂಬರಃ=ರೌಹಿಣೇಯಃ_ ತಾಲಾಂಕಃ-ಮುಸಲೀ=ನ್=ಹಲೀ=ನ್-ಸಂಕರ್ಷಣಃ-ಸ್ಸೀರಪಾಣಿಃ=ಕಾಳಿಂದೀಭೇದನಃ_ ಬಲಃ=ಪು==೧೭=ಬಲರಾಮನ ಹೆಸರುಗಳು.

ಮದನೋಮನ್ಮಥೋಮಾರಃಪ್ರದ್ಯುಮ್ನೋ ಮೀನಕೇತನಃ। ಕಂದರ್ಪೋದರ್ಪಕೋನಂಗಃಕಾಮಃಪಂಚಶರಸ್ಮರಃ ॥ ಶಂಬರಾರಿರ್ಮನಸಿಜಃಕುಸುಮೇಷುರನನ್ಯಜಃ । ಪುಷ್ಪಧನ್ವಾರತಿಪತಿರ್ಮಕರಧ್ವಜಆತ್ಮಭೂಃ ॥ ೨೬ ॥ ಬ್ರಹ್ಮಸೂರ್ವಿಶ್ವಕೇತುಸ್ಸ್ಯಾದನಿರುದ್ಧಉಷಾಪತಿಃ॥ ಶೃಂಗರಯೋನಿಶ್ಶ್ರೀಪುತ್ರಶ್ಶೂರ್ಪಕಾರಾತಿರಿತ್ಯಪಿ॥ ಅರವಿಂದಮಶೋಕಂಚ ಚೂತಂಚನವಮಲ್ಲಿಕಾ। ನೀಲೋತ್ಪಲಂಚಪಂಚೈತೇ ಪಂಚಬಾಣಸ್ಯಸಾಯಕಾಃ॥

ಮದನಃ=ಮನ್ಮಥಃ-ಮಾರಃ=ಪ್ರದ್ಯುಮ್ನಃ_ಮೀನಕೇತನಃ==ಕಂದರ್ಪಃ=ದರ್ಪಕಃ=ಅನಂಗಃ=ಕಾಮಃ=ಪಂಚಶರಃ=ಸ್ಮರಃ=ಶಂಬರಾರಿಃ_ಮನಸಿಜಃ= ಕುಸುಮೇಷುಃ=ಅನನ್ಯಜಃ-ಪುಷ್ಪಧನ್ವಾ-ನ್-ರತಿಪತಿಃ=ಮಕರಧ್ವಜಃ=ಆತ್ಮಭೂಃ-ಊ=ಬ್ರಹ್ಮಸೂಃ=ಊ=ವಿಶ್ವಕೇತುಃ=ಪು- ಋಶ್ಯಕೇತುಃ=೧೨=ಮನ್ಮಥನ ಹೆಸರುಗಳು. ಅನಿರುದ್ಧಃ=ಉಷಾಪತಿಃ= ೨=ಪು=೨= ಅನಿರುದ್ಧನ ಹೆಸರುಗಳು. ॥ಮಾತ್ರಾ॥ ಶೃಂಗಾರಯೋನಿಃ=ಶ್ರೀಪುತ್ರಃ= ಶೂರ್ಪಕಾರಾತಿಃ=ಪು=೩==ಮನ್ಮಥನ ಹೆಸರುಗಳೆಂತಲೂ, ಅರವಿಂದಂ=ಅಶೋಕಂ=ಚೂತಂ==೩=ನ=ನವಮಲ್ಲಿಕಾ=ಸ್ತ್ರೀ==ನೀಲೋತ್ಪಲಂ=ನ=ಈ೫=ಮನ್ಮಥನ ಹೆಸರಳುಗಳೆಂತಲೂ ಅಧಿಕಪಾಠಬಳಿಕೆಗೊಂಡಿದೆ.

CC-0. Jangamwadi Math Collection. Digitized by eGangotri

ಲಕ್ಷ್ಮೀಃಪದ್ಮಾಲಯಾಪದ್ಮಾಕಮಲಾಶ್ರೀರ್ಹರಿಪ್ರಿಯಾ । ಇಂದಿರಾ ಲೋಕಮಾತಾಮಾರಮಾಮಂಗಳ ದೇವತಾ । ಭಾರ್ಗವೀಲೋಕಜನನೀ ಕ್ಷೀರಸಾಗರಕನ್ಯಕಾ ॥

ಲಕ್ಷ್ಮೀಃ-ಈ-ಪದ್ಮಾಲಯಾ-ಪದ್ಮಾ-ಕಮಲಾ=ಆ=ಶ್ರೀಃ=ಈ==ಹರಿಪ್ರಿಯಾ=ಸ್ತ್ರೀ=೬=ಲಕ್ಷ್ಮೀದೇವಿಯ ಹೆಸರುಗಳು, ಇಂದಿರಾ=ಲೋಕಮಾತಾ=ಮಾ=ರಮಾ=ಮಂಗಳದೇವತಾ=ಭಾರ್ಗವೀ= ಲೋಕಜನನಿ=ಕ್ಷೀರಸಾಗರಕನ್ಯಕಾ==ಸ್ತ್ರೀ V=ಲಕ್ಷ್ಮಿಯಹೆಸರುಗಳೆಂತಲೂ= ಅಧಿಕಪಾಠ ಹೇಳುವರು.

ಶಂಖೋಲಕ್ಷ್ಮೀಪತೇಃಪಾಂಚಜನ್ಯಶ್ಚಕ್ರಂಸುದರ್ಶನಂ ಕೌಮೋದಕೀ ಗದಾಖಡ್ಗೋನಂದಕಃ ಕೌಸ್ತುಭೋಮಣಿಃ ॥ ಚಾಪಶ್ಶಾರ್ಙ್ಗಂಮುರಾರೇಸ್ತು ಶ್ರೀವತ್ಸೋಲಾಂಛನಂಮತಂ॥

ಪಾಂಚಜನ್ಯಃ==ಪು=ಲಕ್ಷ್ಮೀಪತೇಶ್ಶಂಖಃ=ವಿಷ್ಣುದೇವರ ಶಂಖದಹೆಸರು=ಸುದರ್ಶನಂ=ನ=೧=ಚಕ್ರಂ= ವಿಷ್ಣುವಿನ=ಚಕ್ರದಹೆಸರು-ಕೌಮೋದಕೀ=ಸ್ತ್ರೀ=೧= ಗದಾ= ವಿಷ್ಣುಗದೆಯಹೆಸರು=ನಂದಕಃ= ಪು=೧= ಖಡ್ಗಃ==ವಿಷ್ಣುಖಡ್ಗದಹೆಸರು= ಕೌಸ್ತುಭಃ=ಪು=೧=ಮಣಿಃ=ವಿಷ್ಣುವ್ನಧರಿಸುವಮಣಿಯಹೆಸರು ॥ ಶಾರ್ಙ್ಗಂ=೧=ನ=ವಿಷ್ಣುವಿನಬಿಲ್ಲಿನಹೆಸರು । ಶ್ರೀವತ್ಸಃ=ಪು=೧= ವಿಷ್ಣುಮೂರ್ತಿಯಲ್ಲಿರುವಸೌಭಾಗ್ಯಚಿಹ್ನವೆಂಬಮಚ್ಚೆ.

ಗರುತ್ಮಾನ್ ಗರುಡಸ್ತಾರ್ಕ್ಷ್ಯೋ ವೈನತೇಯಃಖಗೇಶ್ವರಃ । ನಾಗಾಂತಕೋವಿಷ್ಣುರಥಃ ಸುಪರ್ಣಃ ಪನ್ನಗಾಶನಃ ॥

ಗರುತ್ಮಾನ್=ತ್=ಗರುಡಃ=ತಾರ್ಕ್ಷ್ಯಃ= ವೈನತೇಯಃ=ಖಗೇಶ್ವರಃ= ನಾಗಾಂತಕಃ= ವಿಷ್ಣುರಥಃ-ಸುಪರ್ಣಃ==ಪನ್ನಗಾಶನಃ= ಪು=ವಿಷ್ಣುದೇವರ ವಾಹನವಾದ ಗರುಡನ ಹೆಸರುಗಳು.

ಶಂಭುರೀಶಃ ಪಶುಪತಿಶ್ಶಿವಃಶೂಲೀಮಹೇಶ್ವರಃ । ಈಶ್ವರಶ್ಶರ್ವಈಶಾನಃ ಶಂಕರಶ್ಚಂದ್ರಶೇಖರಃ ॥ ಭೂತೇ

ಶಂಭುಃ=ಉ=ಈಶಃ=ಪಶುಪತಿಃ_ಇ=ಶಿವಃಶೂಲೀ=ನ್=ಮಹೇಶ್ವರಃ-ಈಶ್ವರಃ-ಶರ್ವಃ=ಈಶಾನಃ=ಶಂಕರಃ= ಚಂದ್ರಶೇಖರಃ=ಭೂತೇಶಃ= ಖಂಡಪರಶುಃ=ಗಿರೀಶಃ=ಗಿ

CC-0. Jangamwadi Math Collection. Digitized by eGangotri

ಶಃಖಂಡಪರಶು ರ್ಗಿರೀಶೋಗಿ ರಿಶೊಮೃಡಃ । ಮೃತ್ಯುಂಜ ಯಃ ಕೃತ್ತಿವಾಸಾಃ ಪಿನಾ ಕೀಪ್ರಮಥಾಧಿಪಃ॥ ಉಗ್ರಃ ಕಪರ್ದೀಶ್ರೀಕಂಠಃ ಶಿತಿಕಂ ಠಃಕಪಾಲಭೃತ್ । ವಾಮದೇ ವೋ ಮಹಾದೇವೋವಿರೂಪಾಕ್ಷ ಸ್ತ್ರಿಲೋಚನಃ । ಕೃಶಾನು ರೇತಾಸ್ಸರ್ವಜ್ಞೋ ಧೂರ್ಜಟಿ ರ್ನೀಲಲೋಹಿತಃ॥ ಹರಸ್ಮರಹ ರೋಭರ್ಗಸ್ತ್ರ್ಯಂಬಕಸ್ತ್ರಿ ಪುರಾಂತಕಃ। ಗಂಗಾಧರೋಂ ಧಕರಿಪುಃಕ್ರತುಧ್ವಂಸೀವೃಷ ಧ್ವಜಃ । ವ್ಯೋಮಕೇಶೋಭ ವೋಭೀಮ ಸ್ಥಾಣೂರುದ್ರ ಉಮಾಪತಿಃ । ಅಷ್ಟಮೂ ರ್ತಿರಹಿರ್ಬುಧ್ನ್ಯ ಮಹಾ ಕಾಲೋಮಹಾನಟಃ॥

ಕಪರ್ದೋಸ್ಯ ಜಟಾಜೂ ಟಃಪಿನಾಕೋಜಗಬಂ ಧನುಃ॥ ಪ್ರಮಥಾಸ್ಯುಃ ಪಾರಿಷದಾ ಬ್ರಾಹ್ಮೀತ್ಯಾದ್ಯಾಸ್ತು ಮಾತರಃ। ಬ್ರಾಹ್ಮೀಮಾಹೇ ಶ್ವರೀ ಚೈವಕೌಮಾರೀ ವೈ ಷ್ಣವೀತಥಾ । ವಾರಾಹೀ ಚೈವಚೇಂದ್ರಾಣೀಚಾಮುಂ ಡಾಸಪ್ತಮಾತರಃ ॥ ವಿಭೂ ತಿರ್ಭೂತಿರೈಶ್ವರ್ಯಮ ಣಿಮಾ

ರಿಶಃ-ಮೃಡಃ-ಮೃತ್ಯುಂಜಯಃ-ಕೃತ್ತಿವಾಸಾಃ=ಸ=ಪಿನಾಕೀ-ಪ್ರಮಥಾಧಿಪಃ= ಉಗ್ರಃ=ಕಪರ್ದೀ=ನ್-ಶ್ರೀಕಂಠಃ=ಶಿತಿಕಂಠಃ=ಕಪಾಲಭೃತ್=ವಾಮದೇವಃ=ಮಹಾದೇವಃ=ವಿರೂಪಾಕ್ಷಃ=ತ್ರಿಲೋಚನಃ-ಕೃಶಾನುರೇತಾಃ=ಸ=ಸರ್ವಜ್ಞಃ- ಧೂರ್ಜಟಿಃ-ನೀಲಲೋಹಿತಃ= ಹರಃ=ಸ್ಮರಹರಃ=ತ್ರ್ಯಂಬಕಃ-ತ್ರಿಪುರಾಂತಕಃ=ಗಂಗಾಧರಃ=ಅಂಧಕರಿಪುಃ= ಕ್ರತುಧ್ವಂಸೀ=ನ್=ವೃಷಧ್ವಜಃ-ವ್ಯೋಮಕೇಶಃ- ಭವಃ=ಭೀಮಃ-ಸ್ಥಾಣುಃ=ರುದ್ರಃ=ಉಮಾಪತಿಃ- ಪುಲ್ಲಿಂ=೪೮ =ಶಿವನಹೆಸರುಗಳು. ಮತ್ತು, ಅಷ್ಟಮೂರ್ತಿಃ=ಅಹಿರ್ಬುಧ್ನ್ಯಃ==ಮಹಾಕಾಲಃ-ಮಹಾನಟಃ-ಕಟಾಟಂಕಃ= ಕಂಕಟಕಃ=ಕಪೋಟಃ=ಊ=ಪರಮೇಶ್ವರಃ=ಲಿಂಗಮೂರ್ತಿಃ-ಜಟಾಟೀರಃ= ಜಾಟಾಟೀರಃ=ಅಗ್ನಿಲೋಚನಃ-ಪು=೧೨= ಶಿವನಹೆಸರುಗಳಿಂತಲೂ ಅಧಿಕವಾಗಿವೆ.

ಕಪರ್ದಃ-ಪು-೧-ಅಸ್ಯಜಟಾಜೂಟಃ_ಈ ಶಿವನ ಜಟಾಜೂಟವೆಂಬ ಜಡೆಮುಡಿಯಹೆಸರು-ಪಿನಾಕಃ-ಪು-ಅಜಗವಂ-ನ--೨-ಧನುಃ-ಈ ಶಿವನ-ಬಿಲ್ಲಿನ ಹೆಸರುಗೆಳು. ಪ್ರಮಥಾಃ=ಪು-ಬ-೧-ಪಾರಿಷದಾಃ ಶಿವನ ಸಭೆಯಲ್ಲಿರುವ ನಂದಿ ಮುಂತಾದ ಗಣಂಗಳ ಹೆಸರುಗಳು. ಮಾತರಃ=ಋಸ್ತ್ರೀ-ಬ-೧-ಬ್ರಾಹ್ಮೀತ್ಯಾದ್ಯಾಃ-ಬ್ರಾಹ್ಮೀ ಮುಂತಾದ ಸಪ್ತಮಾತೃಕೆಯರ ಹೆಸರುಗಳು. ವಿಭೂತಿಃ-ಭೂತಿಃ-ಸ್ತ್ರೀ-

CC-0. Jangamwadi Math Collection. Digitized by eGangotri

ದಿಕಮಷ್ಟಥಾ||

ಅಣಿಮಾಮಹಿಮಾಚೈವಗರಿಮಾಲಘಿಮಾತಥಾ ಪ್ರಾಪ್ತಿಃ ಪ್ರಾಕಾಮ್ಯಮೀಶತ್ವಂ ವಶಿತ್ವಂಚಾಷ್ಟಭೂತಯಃ||

ಉಮಾಕಾತ್ಯಾಯನೀಗೌರಿಕಾಳೀಹೈಮವತೀಶ್ವರಿ || ಶಿವಾಭವಾನೀ ರುದ್ರಾಣೀ ಶರ್ವಾಣೀಸರ್ವಮಂಗಳಾ । ಅಪರ್ಣಾ ಪಾರ್ವತೀದುರ್ಗಾ ಮೃಡಾನೀಚಂಡಿಕಾಂಬಿಕಾ || ಆರ್ಯಾದ್ರಾಕ್ಷಾಯಣೀಚೈವ ಗಿರಿಜಾ ಮೇನಕಾತ್ಮಜಾ||

ವಿನಾಯಕೋವಿಘ್ನರಾಜದ್ವೈಮಾತುರಗಣಾಧಿಪಾಃ । ಅಪ್ಯೇಕದಂತಹೇರಂಬ ಲಂ

-ಐಶ್ವರ್ಯಂ-ನ-೩-ಅಷ್ಟಥಾ- (ವರ್ತಮಾನಂ) ಅಣಿಮಾದಿಕಂ-ಎಂಟುಬಗೆಯಾಗಿ ರುವ-ಅಣಿಮಾದಿಸಿದ್ಧಿಗಳು.

ಅಣುರೂಪವಾಗಿರುವದು=ಅಣಿಮಾ=ಮಹಾರೂಪವನ್ನು ಹೊಂದುವದು ಮಹಿಮಾ=ಗುರುತ್ವದಿಂದ=ಗರಿಮೆ=ಕಾಸಭಾರವಾಗಿರುವದು=ಅಂದರೆ= ಲಘುತ್ವದಿಂದ=ಲಘುಮೆಯು=ಬೇಕಾದ ಇಷ್ಟಾರ್ಥಗಳನ್ನು=ಹೊಂದುವದು=ಪ್ರಾಪ್ತಿಯು=ಮತ್ತು=ಇಚ್ಛೆಯಿಂದ-ನಿರ್ವಿಘ್ನವಾಗಿ-ಸಂಚಾರಶಕ್ತಿ=ಯಾವದರಿಂದ=ಆಗುವದೋ ಅದು ಪ್ರಾಕಾಮ್ಯ= ಯೆಲ್ಲರಿಗಿಂತಲೂ ಶ್ರೇಷ್ಠವಾಗಿರುವದು =ಈಶತ್ವ=ಇಂದ್ರಿಯಗಳನ್ನು =ಸ್ವಾಧೀಧೀನಮಾಡಿಕೊಂಡಿರುವದು= ವಶಿತ್ವ=ಇವು=ಅಷ್ಟೈಶ್ವರ್ಯಗಳು.

ಉಮಾ-ಆ-ಕಾತ್ಯಾಯನೀ-ಗೌರೀ-ಕಾಳೀ-ಹೈಮವತೀ- ಈಶ್ವರೀ-ಶಿವಾ-ಭವಾನೀ-ರುದ್ರಾಣೀ -ಶರ್ವಾಣೀ-ಸರ್ವಮಂಗಳಾ- ಅಪರ್ಣಾ- ಪಾರ್ವತೀ- ದುರ್ಗಾ-ಮೃಡಾಣೀ-ಚಂಡಿಕಾ- ಅಂಬಿಕಾ-ಸ್ತ್ರೀ-೧೭-ಶಿವಪತ್ನಿಯಾದಪಾರ್ವತೀದೇವಿಯ ಹೆಸರುಗಳು. ಮತ್ತು ||ಆರ್ಯಾ-ದಾಕ್ಷಾಯಣೀ-ಗಿರಿಜಾ-ಮೇನಕಾತ್ಮಜಾ-೪-ಸ್ತ್ರೀ-ಅಧಿಕಪಾಠದಲ್ಲಿಶಿವಶಕ್ತಿಯ ಹೆಸರುಗಳು.

ವಿನಾಯಕಃ- ವಿಘ್ನರಾಜಃ-ದ್ವೈಮಾತುರಃ-ಗಣಾಧಿಪಃ- ಏಕದಂತಃ-ಹೇರಂಬಃ-ಲಂಬೋದರಃ- ಗಜಾನನಃ- ಪು-೮-ಶಿವಕು

CC-0. Jangamwadi Math Collection. Digitized by eGangotri

ಬೋದರಗಜಾನನಾಃ ॥೩೮॥

ತ್ರನಾದ ಗಣಪತಿಯ ಹೆಸರುಗಳು.

ಕಾರ್ತಿಕೇಯೋಮಹಾಸೇನಃಶರಜನ್ಮಾಷಡಾನನಃ । ಪಾರ್ವತೀನಂದನಸ್ಕಂದ ಸ್ಸೇನಾನೀರಗ್ನಿಭೂರ್ಗುಹಃ॥೩೯ ಬಾಹುಲೇಯಸ್ತಾರಕಜಿದ್ವಿಶಾಖಶ್ಶಿಖಿವಾಹನಃ। ಷಾಣ್ಮಾತುರಶ್ಶಕ್ತಿಧರಃ ಕುಮಾರಃ ಕ್ರೌಂಚದಾರಣಃ॥

ಕಾರ್ತಿಕೇಯಃ- ಮಹಾಸೇನಃ- ಶರಜನ್ಮಾ- ನ್- ಷಡಾನನಃ_ಪಾರ್ವತೀನಂದನಃ_ಸ್ಕಂದಃ- ಸೇನಾನೀಃ-ಈ- ಅಗ್ನಿಭೂಃ-ಊ-ಗುಹಃ= ಬಾಹುಲೇಯಃ=ತಾರಕಜಿತ್=ತ್=ವಿಶಾಖಃ= ಶಿಖಿವಾಹನಃ= ಷಾಣ್ಮಾತುರಃ= ಶಕ್ತಿಧರಃ=ಕುಮಾರಃ= ಕ್ರೌಂಚಧಾರಣಃ= ಪು=೧೭=ಶಿವಪುತ್ರನಾದ ಕುಮಾರಸ್ವಾಮಿಯ ಹೆಸರುಗಳು ಮತ್ತು, ಭೃಂಗೀ=ನ್=ಭೃಂಗೀರಿಟಃ=ತಂಡುಃ=ಶೈಲಾದಿಃ=ಪುಲ್ಲಿಂಬಳ= ನಂದೀಶ್ವರನ ಹೆಸರುಗಳೆಂದಿಲ್ಲಿ ಅಧಿಕಪಾಠ.

ಭೃಂಗೀಭೃಂಗಿರಿಟಸ್ತಂಡು ನಂದಿನೌನಂದಿಕೇಶ್ವರೆ । ಕರ್ಣಮೋಟೀತು ಚಾಮುಂಡಾ ಚರ್ಮಮುಂಡಾತುಚರ್ಚಿಕಾ। ಚರ್ಚಾತುಚರ್ಚಿಕಾ ಚಂಡಾ ಟಾಸಭವ ಕಾಳ್ಯಪಿ॥

ಭೃಂಗಿಮೊದಲಾದ=೫=ನಾಮಗಳು, ನಂನಂದಿಕೇಶ್ವರನ ಹೆಸರು. ಕರ್ಣಮೋಟ=ಮೊದಲಾದ=೮=ದೇವೀ ಪರಿಚಾರಿಕೆಯರ ಹೆಸರುಗಳು.

ಇಂದ್ರೋಮರುತ್ವಾನ್ಮಘವಾಬಿಡೌಜಾಃ ಪಾಕಶಾಸನಃ ।ವೃದ್ಧಶ್ರವಾಶ್ಶುನಾಸೀರಃಪುರುಹೂತಃಪುರಂದರಃ । ಜಿಷ್ಣುರ್ಲೇಖರ್ಷಭಶ್ಶಕ್ರಶ್ಶತಮನ್ಯುರ್ದಿವಸ್ಪತಿಃ ।ಸುತ್ರಾಮಾಗೋತ್ರಭಿದ್ವಜ್ರೀ ವಾಸವೋವೃತ್ರಹಾವೃಷಾ ॥ ವಾಸ್ತೋಷ್ಪತಿ ಸುರಪತಿ ರ್ಬಲಾರಾತಿಶ್ಶಚೀಪತಿಃ । ಜಂಭ

ಇಂದ್ರಃ= ಮರುತ್ವಾನ್=ತ್=ಮಘವಾ=ನ್=ಬಿಡೌಜಾಃ=ಸ್- ಪಾಕಶಾಸನಃ ವೃದ್ಧಶ್ರವಾಃ=ಸ್ =ಶುನಾಸೀರಃ=ಪುರುಹೂತಃ=ಪುರಂದರಃ =ಜಿಷ್ಣುಃ=ಲೇಖರ್ಷಭಃ=ಶಕ್ರಃ=ಶತಮನ್ಯುಃ =ದಿವಸ್ಪತಿಃ= ಸುತ್ರಾಮಾ=ನ್ =ಗೋತ್ರಭಿತ್=ದ್=ವಜ್ರೀ=ನ್ =ವಾಸವಃ=ವೃತ್ರಹಾ =ನ್= ವೃಷಾ-ನ್=ವಾಸ್ತೋಷ್ಪತಿಃಸುರಪತಿಃ- ಬಲಾರಾತಿ=ಶಚೀಪತಿಃ= ಜಂಭಭೇದೀ=ನ್ =ಹರಿಹಯಃ= ಸ್ವರಾಟ್- ಜ=ಮುಚಿಸೂ

CC-0. Jangamwadi Math Collection. Digitized by eGangotri

ಬೇದೀಹರಿಹಯಃ ಸ್ವಾರಾಣ್ಣ
ಮುಚಿಸೂದನಃ ॥೪೩॥ ಸಂ
ಕ್ರಂದನೋ ದುಶ್ಚ್ಯವನಸ್ತು
ರಾಷಾನ್ಮೇಘವಾಹನಃ। ಪ್ರಾ
ಚೀನಬರ್ಹಿರಹಿಹಾ ಪೃತನಾ
ಷಾಟ್ಪುಲೋಮಜಿತ್। ಆಖಂ
ಡಲಸ್ಸಹಸ್ರಾಕ್ಷಋಭುಕ್ಷಾ
ಸ್ತಸ್ಯತುಪ್ರಿಯಾ ॥೪೪॥
ಪುಲೋಮಜಾ ಶಚೀಂದ್ರಾ
ಣೀ । ನಗರೀತ್ವಮರಾವತೀ॥

ದನಃ=ಸಂಕ್ರಂದನಃ=ದುಶ್ಚ್ಯವನಃ=ತು
ರಾಷಾಟ್=ಜ= ಮೇಘವಾಹನಃ- ಆಖಂ
ಲಃ_ಸಹಸ್ರಾಕ್ಷಃ= ಋಭುಕ್ಷಾ=ಣ್=ಪು
೩೫=ದೇವೇಂದ್ರನ ಹೆಸರುಗಳು.ಮತ್ತು
ಪ್ರಾಚೀನಬರ್ಹಿಃ=ಅಹಿಹಾ=ಣ=ಪೃತನಾ
ಷಾಟ್=ಹು-ಪುಲೋಮಜಿತ್=ತ್=೪=ಪು
ಇವೂ ಇಂದ್ರನ ಹೆಸರುಗಳೆಂದು ಅಧಿ
ಪಾಠವಿದೆ.

ಪುಲೋಮಜಾ=ಆ-ಶಚೀ=ಈ=ಇಂದ್ರಾ
ಣೀಸ್ತ್ರೀ=೩=ತಸ್ಯ=ಆ ಇಂದ್ರನ=ಪ್ರಿ
ಯಾ=ಭಾರ್ಯೆಯ ಹೆಸರುಗಳು ಅಮ
ರಾವತೀಸ್ತ್ರೀ=೧=ನಗರೀ =ಇಂದ್ರನ=ಪ
ಣದಹೆಸರು.

ಹಯಉಚ್ಚೈಶ್ಶ್ರವಾಸ್ಸೂ
ತೋ ಮಾತಲಿರ್ನಂದನಂ ವ
ನಂ । ಸ್ಯಾತ್ಪ್ರಾಸಾದೋ
ವೈಜಯಂತೋಜಯಂತಃ ಪಾ
ಕಶಾಸನಿಃ।

ಉಚ್ಚೈಶ್ಶ್ರವಾಃ=ಸ=ಪು=೧-ಹಯ
ಆತನ ಕುದರೇ ಹೆಸರು. ಮಾತಲಿಃ=ಪು
೧=ಸೂತಃ=ಆತನ ಸಾರಥಿ ಹೆಸರು. ನಂ
ದನಂ=ಸ=೧=ವನಂ ಆತನತೋಟದ ಹೆ
ಸರು ವೈಜಯಂತಃ=ಪು=ಪ್ರಾಸಾದ
ಆತನ ಉಪ್ಪರಿಗೆ ಹೆಸರು. ಜಯಂತ
ಪಾಕಶಾಸನಿಃ=ಪು=೨=ಆತನ ಕುಮಾ
ನ ಹೆಸರುಗಳು.

ಐರಾವತೋಭ್ರಮಾತಂಗೈರಾ
ವಣಾಭ್ರಮುವಲ್ಲಭಾಃ । ಹ್ರಾ
ದಿನೀವಜ್ರಮಸ್ತ್ರೀಸ್ಯಾತ್ಕು
ಲಿಶಂಭಿದುರಂಪವಿಃ। ಶತಕೋ
ಟಿಸ್ಸ್ವರುಶ್ಶಂಬೋದಂಭೋಲಿರಶ
ನಿರ್ದ್ವಯೋಃ ॥
ವ್ಯೋಮಯಾನಂವಿಮಾನೋ

ಐರಾವತಃ=ಅಭ್ರಮಾತಂಗಃ=ಐರಾ
ಣಃ=ಅಭ್ರಮುವಲ್ಲಭಃ=ಪು=೪=ಆತನ
ನೇಹೆಸರುಗಳು= ಹ್ರಾದಿನೀ==ಸ್ತ್ರೀ
ಜ್ರಂ=ಪ್ನ=ಕುಲಿಶಂ==ಭಿದುರಂ=ಸ
ವಿಃ=ಪ್ಸ=೧೦==ವಜ್ರಾಯುಧದ ಹೆ
ಗಳು.

ವ್ಯೋಮಯಾನಂ=ನ_ ವಿಮಾನಃ

CC-0. Jangamwadi Math Collection. Digitized by eGangotri

ಸ್ತ್ರೀನಾರದಾದ್ಯಾಃ ಸುರ
ರ್ಷಯಃ । ಸ್ಯಾತ್ಸುಧರ್ಮಾ
ದೇವಸಭಾ ಪೀಯೂಷಮಮೃ
ತಂಸುಧಾ । ಮಂದಾಕಿನೀವಿ
ಯದ್ಗಂಗಾ ಸ್ವರ್ಣದೀಸುರ
ದೀರ್ಘಿಕಾ । ಮೇರುಸ್ಸುಮೇ
ರುರುರ್ಹೇಮಾದ್ರಿ ರತ್ನಸಾ
ನುಸ್ಸುರಾಲಯಃ । ಪಂಚೈ
ತೇದೇವತರವೋ ಮಂದಾರಃಪಾ
ರಿಜಾತಕಃ । ಸಂತಾನಃಕಲ್ಪ
ವೃಕ್ಷಶ್ಚ ಪುಂಸಿವಾ ಹರಿಚಂದ
ನಂ ॥೫೦॥

=ದೇವರಥದ ಹೆಸರುಗಳು. ಸುರರ್ಷಯಃ =ಇ=ಪು=ಬ=೧= ನಾರದಾದ್ಯಾಃ=ನಾರದ ನು ಮೊದಲಾದ ಋಷಿಗಳ ಹೆಸರುಗಳು. ಸುಧರ್ಮಾ=ಆ_ಪ=ಸುಧರ್ಮಾ=ಸ=ದೇವ ಸಭಾ=ಸ್ತ್ರೀ=೨=ದೇವತೆಗಳ ಸಭೆಯ ಹೆಸರುಗಳು. ಪೀಯೂಷಂ=ಅಮೃತಂ=ನ ಸುಧಾ=ಸ್ತ್ರೀ=೩=ಅಮೃತದ ಹಸರುಗಳು. ಮಂದಾಕಿನೀ= ವಿಯದ್ಗಂಗಾ=ಸ್ವರ್ಣದೀ-ಸುರದೀರ್ಘಿಕಾ=ಸ್ತ್ರೀ=೪=ಆಕಾಶಗಂಗೆಹೆಸರುಗಳು. ಮೇರುಃ=ಸುಮೇರುಃ=ಹೇಮಾದ್ರಿಃ=ರತ್ನಸಾನುಃ=ಸುರಾಲಯಃ =ಪು-೫- ಮೇರುಪರ್ವತದ ಹೆಸರುಗಳು. ಮಂದಾರಃ=ಪಾರಿಜಾತಕಃ=ಸಂತಾನಃ= ಕಲ್ಪವೃಕ್ಷಃ= ಪು=ಹರಿಚಂದನಂ=ಪು=ನ ॥ ಈ೫=ದೇವತರವಃ=ದೇವತಾಕಲ್ಪವೃಕ್ಷಗಳ ಹೆಸರುಗಳು.

ಸನತ್ಕುಮಾರೋವೈಧಾತ್ರಃ=
ಸ್ವರ್ವೈದ್ಯಾ ವಶ್ವಿನೀಸು
ತೌ । ನಾಸತ್ಯಾವಶ್ವಿನೌದ
ಸ್ರಾವಾಶ್ವಿನೇಯೌ ಚತಾವು
ಭೌ॥

ಸನತ್ಕುಮಾರಃ=ವೈಧಾತ್ರಃ=ಪು=೨ ಬ್ರಹ್ಮಪುತ್ರನಾದ ಸನತ್ಕುಮಾರನ ಹೆಸರುಗಳುಸ್ವರ್ವೈದ್ಯೌ=ಅಶ್ವಿನೀಸುತೌ= ನಾಸತ್ಯೌ=ಅಶ್ವಿನೌ=ಸು= ದಸ್ರೌ=ಆಶ್ವಿನೇಯೌ-ಅವು-ದ್ವಿವಚನ-೬-ದೇವವೈದ್ಯರಾದಅಶ್ವಿನೀದೇವತೆಗಳ ಹೆಸರುಗಳು.

ಸ್ತ್ರಿಯಾಂಬಹುಷ್ವಪ್ಸ
ರಸ । ಸ್ವರ್ವೇಶ್ಯಾಊರ್ವಶಿ
ಮುಖಾಃ।

ಅಪ್ಸರಸಃ-ಸ-ಸ್ವರ್ವೇಶ್ಯಾಃ-ಸ್ತ್ರೀ ಬ=೨-. ಊರ್ವಶೀಮುಖಾಃ_ಊರ್ವಶೀ ಮೊದಲಾದ ದೇವತಾವೇಶ್ಯೆಯರ ಹೆಸರುಗಳು.

ಘೂರ್ವಶೀಮೇನಕಾರಂಭಾಘೃ
ತಾಚೀಚತಿಲೋತ್ತಮಾ.

ಘೂರ್ವಶೀ, ಮೇನಕಾರಂಭಾ, ಘೃತಾಚೀ ತಿಲೋತ್ತಮಾ ಇವು ದೇವತಾವೇಶ್ಯಾಹೆ

CC-0. Jangamwadi Math Collection. Digitized by eGangotri

(ಹಾಹಾ ಹೂಹೂ ಶ್ಚೈವಮಾದ್ಯಾಃ) ಗಂಧರ್ವಾ ಸ್ತ್ರಿದಿವೌಕಸಾಮ್॥

ಅಗ್ನಿರ್ವೈಶ್ವಾನರೋವಹ್ನಿ ರ್ವೀತಿಹೋತ್ರೋಧನಂಜಯಃ । ಕೃಪೀಟಯೋನಿ ರ್ಜ್ವಲನೋ ಜಾತವೇದಾಸ್ತನೂನಪಾತ್ ॥ ಬರ್ಹಿಃಶುಷ್ಮಾಕೃಷ್ಣವ ರ್ತ್ಮಾಶೋಚಿಷ್ಕೇಶಉಷರ್ಬುಧಃ।ಆಶ್ರಯಾಶೋ ಬೃಹದ್ಭಾ ನುಃ ಕೃಶಾನುಃ ಪಾವಕೋನಲಃ ॥೫೪॥ರೋಹಿತಾಶ್ವೋವಾಯು ಸಖಶ್ಶಿಖಾವಾನಾಶುಶುಕ್ಷಣಿಃ । ಹಿರಣ್ಯರೇತಾಹುತಭುಗ್ದಹನೋ ಹವ್ಯವಾಹನಃ । ಸಪ್ತಾರ್ಚಿ ರ್ದಮುನಾಶ್ಶುಕ್ರಶ್ಚಿತ್ರಭಾ ನುರ್ವಿಭಾವಸುಃ ।

ಶುಚಿರಪ್ಪಿತ್ತಮೌರ್ವಸ್ತು ಬಾಡಬೋಬಡಬಾನಲಃ । ವ ಹ್ನೇ(ರ್ದ್ವಯೋ) ರ್ಜ್ವಾಲಕೀ ಲಾವರ್ಚಿರ್ಹೇತಿಶ್ಶಿಖಾ (ಸ್ತ್ರಿ ಯಾಂ । ತ್ರಿಷು)ಸ್ಫುಲಿಂಗೋ ಗ್ನಿಕಣಃ ಸಂತಾಪಸ್ಸಂಜ

ಸರು

ಗಂಧರ್ವಾಃ-॥ಪು॥ ಗಾಂಧರ್ವಾಃ-ಪು-ಬ_೧-ತ್ರಿದಿವೌಕಸಾಂ ದೇವತೆಗಳೊಳಗೆ-ಹಾಹಾಃ ॥ ಆಹೂಹೂಶ್ಚ॥ಊ_ಹಾಹಾಹೂಹೂಗಳನ್ನು ಎವಮಾದ್ಯಾಃ॥ ಇವರು ಮುಂತಾದ ದೇವಗಾಯಕರ ಹೆಸರುಗಳು.

ಅಗ್ನಿಃ-ಇ-ವೈಶ್ವಾನರಃ-ವಹ್ನಿಃ-ವೀತಿಹೋತ್ರಃ- ಧನಂಜಯಃ-ಕೃಪೀಟಯೋನಿಃ-ಜ್ವಲನಃ-ಜಾತವೇದಾಃ-ಸ- ತನೂನಪಾತ್-ದ್_ಬರ್ಹಿಃ-ಸ-ಶುಷ್ಮಾ-ಸ್_ಪ-ಬರ್ಹಿಶ್ಶುಷ್ಮಾ-ನ್-ಕೃಷ್ಣವರ್ತ್ಮಾ-ಶೋಚಿಷ್ಕೇಶಃ_ಉಷರ್ಬುಧಃ- ಆಶ್ರಯಾಶಃ-ಬೃಹದ್ಭಾನುಃ-ಕೃಶಾನುಃ- ಪಾವಕಃ-ಅನಲಃ- ರೋಹಿತಾಶ್ವಃ=ವಾಯುಸಖಃ=ಶಿಖಾವಾನ್ -ತು-ಆಶುಶುಕ್ಷಣಿಃ=ಹಿರಣ್ಯರೇತಾಃ= ಸು=ಹುತಭುಕ್=ಜ ಗಹನಃ=ಹವ್ಯವಾಹನಃ=ಸಪ್ತಾರ್ಚಿಃ=ಷ=ದಮುನಾಃ=ಸು=ಶುಕ್ರಃ=ಚಿತ್ರಭಾನುಃ=ವಿಭಾವಸುಃ= ಶುಚಿಃ=ಪು=ಅಪ್ಪಿತ್ತಂ=ನ =೩೪= ಅಗ್ನಿ ಹೋತ್ರನ ಹೆಸರುಗಳು. ಅಂದರೆ, ಬೆಂಕಿಯನ್ನು ವಿಕೆ.

ಔರ್ವಃ=ಬಾಡಬಃ=ಬಡಬಾನಲಃ=ಪು=೩=ಬಡಬಾಗ್ನಿಯು ಹೆಸರುಗಳು. ಜ್ವಾಲಃ=ಕೀಲಃ=ಪ್ಸ=ಅರ್ಚಿಃ-ಸು= ಹೇತಿಃ=ಸ್ತ್ರೀ=೪=ವಹ್ನೇಃ =ಅಗ್ನಿಯು=ಶಿಖಾ_ಜ್ವಾಲೆಯು ಹೆಸರುಗಳು.ಸ್ಫುಲಿಂಗಃ=ತ್ರಿ ಅಗ್ನಿ ಕಣಃ=ಪು_೨=ಕಿಡಿಗಳ ಹೆಸರುಗಳು

CC-0. Jangamwadi Math Collection. Digitized by eGangotri

ರಸ್ಸಮ್ ॥೫೭॥

ಉಲ್ಕಾಸ್ಯಾನ್ನಿರ್ಗ ತಜ್ವಾಲಾ ಭೂತಿರ್ಭಸಿತಭಸ್ಮನಿ ಕ್ಷಾರೋರಕ್ಷಾ ಚದಾವಸ್ತುದವೋ ಪನಹುತಾಶನಃ

ಸಂತಾಪಃ=ಸಂಜ್ವರಃ=ಪು=೨ಬಿಸಿಯ ಹೆಸರುಗಳು.

ಪ್ರುಲ್ಕಾಗ್ನಿ - ಪುರಿಇಲ್ಲದಬೆಂಕಿ,ಭೂತಿರ್ಭಸಿತಭಸ್ಮ-ಕ್ಷಾರಾ-ಶಬ್ದಗಳು ೫ ಬೂದಿಯಹೆಸರು ಆಪತ್ತುಗಳನ್ನು ಹೋಗಲಾಡಿಸುವದು ಕ್ಷತಿ) ಪಿಶಾಚಾದಿಭಯಾವನ್ನು ಹೊಗಲಾಡಿಸುವದುರಕ್ಷೆಯು ದವೋವನಹುತಾಶನಃ ಕಾಡಬೆಂಕಿಯಹೆಸರು

ಧರ್ಮರಾಜಃಪಿತೃಪತಿ ಸಮದ ರ್ತೀಪರೇತರಾಟ್। ಕೃತಾಂತೋ ಯಮುನಾಭ್ರಾತಾ ಶ್ಯಮನೋಯಮರಾಡ್ಯಮಃ ॥ ಕಾದಂಡಧರಶ್ರಾದ್ಧದವೋ ವೈವಸ್ವತೋಂತಕಃ ॥

ಧರ್ಮರಾಜಃ=ಪಿತೃಪತಿಃ=ಸಮವರ್ತೀನು=ಪರೇತರಾಟ್=ಜ=ಕೃತಾಂತಃ=ಯಮುನಾ ಭ್ರಾತಾ=ಋ-ಶಮನಃ=ಯಮರಾಟ್=ಜ=ಯಮಃ=ಕಾಲಃ=ದಂಡಧರಃ=ಶ್ರಾದ್ಧದೇವಃ=ವೈವಸ್ವತಃ=ಅಂತಕಃ=ಪು ೧೪=ಯಮಧರ್ಮರಾಯನ ಹೆಸರುಗಳು ಮತ್ತು, ಕೀನಾಶಃ=ದಕ್ಷಿಣಾಧೀಶಃ=ಮೃತ್ಯುಃ=ಉ= ಪಾಪನಿಯಾಮಕಃ=ಸರ್ವಕರ್ಮವಿಚಾರೀ=ಣ=ಪು=೫=ಯಮನಾಮಗಳು ಚಿತ್ರಗುಪ್ತಃ=ವೃಕೋದರಃ =ಧರ್ಮಃ=ಉದುಂಬರಃ=ನೀಲಃ=ನಿಯಂತಾ ಋ=ಚಿತ್ರಃ=ಪು-೪=ಚಿತ್ರಗುಪ್ತನಾಮಗಳೂ

ರಾಕ್ಷಸಃಕೋಣಪಃಕ್ರವ್ಯಾತ್ಕ್ರವ್ಯಾದೋಸ್ರಪಆಶರ । ರಾತ್ರಿಂಚರೋರಾತ್ರಿಚರಃ । ಕರ್ಬುರೋನಿಕಷಾತ್ಮಜಃ । ಯಾತುಧಾನಃಪುಣ್ಯಜನೋನೈರೃತೋಯಾತುರಕ್ಷಸೀ॥ ೬೦॥

ರಾಕ್ಷಸಃ-ಕೋಣಪಃ=ಪಾ=ಕ್ರವ್ಯಾತ್=ಪ= ಕ್ರವ್ಯಾದಃ=ಅಸ್ರಪಃ= ಪಾ=ಆಶ್ರಪಃ=ಆಶರಃ= ಪಾ=ಅಸುರಃ=ರಾತ್ರಿಂಚರಃ= ರಾತ್ರಿಚರಃ=ಕರ್ಬುರಃ=ಪಾ=ಕರ್ಬುರಃ= ನಿಕಷಾತ್ಮಜಃ=ಯಾತುಧಾನಃ=ನೈರೃತಃ=ಪು=ಯಾತು=ರಕ್ಷಃ=ಸ=ನ=

CC-0. Jangamwadi Math Collection. Digitized by eGangotri

ಪ್ರಚೇತಾವರುಣಃಪಾಶೀ ಯಾದಸಾಂಪತಿರಪ್ಪತಿಃ

ಶ್ವಸನಸ್ಸ್ಪರ್ಶನೋ ವಾಯುರ್ಮಾತರಿಶ್ವಾಸದಾಗತಿಃ। ಪೃಷದಶ್ವೋಗಂಧವಹೋ ಗಂಧವಾಹಾನಿಲಾಶುಗಾಃ। ಸಮೀರಮಾರುತಮರುಜ್ಜಗತ್ಪ್ರಾಣಸಮೀರಣಾಃ। ನಭಸ್ವದ್ವಾತಪವನಪವಮಾನಪ್ರಭಂಜನಾಃ॥

ಪ್ರಾಣೋಪಾನಸ್ಸಮಾನಶ್ಚೋದಾನವ್ಯಾನೌಚವಾಯವಃ॥

ಹೃದಿಪ್ರಾಣೋಗುದೇಪಾನೋಸಮಾನೋನಾಭಿಸಂಸ್ಥಿತಃ। ಉದಾನಃಕಂಠದೇಶಸ್ಥೋ ವ್ಯಾನಸ್ಸರ್ವಶರೀರಗಃ॥ ನಾಗಃ ಕೂರ್ಮಃಕೃಕರೋದೇವದತ್ತೋಧನಂಜಯಃ।ವಾಗ್ವ್ಯಾರೇ ನಾಗಆಖ್ಯಾತಃಕೂರ್ಮ ಉನ್ಮೀಲನೇಸ್ಮೃತಃ। ಕೃಕರಾಚ್ಛುತಂ ಜ್ಞೇಯಂದೇವದತ್ತೋವಿಜೃಂಭಣಂ। ನಜಹಾತಿಮೃತಂವಾಪಿಸರ್ವವ್ಯಾಪೀಧನಂಜಯಃ।

೧೫-ನೈಋುತಿ ಹೆಸರುಗಳು.

ಪ್ರಚೇತಾಃ=ಸು-ವರುಣಃ ಪಾಶೀ=ನ ಯಾದಸಾಂಪತಿಃ=ಅಪ್ಪತಿಃ=ಪು-೫= ವರುಣನಹೆಸರುಗಳು.

ಶ್ವಸನಃ-ಸ್ಪರ್ಶನಃ=ವಾಯುಃ=ಉ= ಮಾತರಿಶ್ವಾ=ನ=ಸದಾಗತಿಃ=ಇ=ಪೃಷದಶ್ವಃ=ಗಂಧವಹಃ- ಗಂಧವಾಹಃ_ಅನಿಲಃ=ಆಶುಗಃಸಮೀರಃ=ಮಾರುತಃ=ಮರುತ್-ತು ಜಗತ್ಪ್ರಾಣಃ=ಸಮೀರಣಃ= ನಭಸ್ವಾನ್=ತು=ವಾತಃ=ಪವನಃ=ಪವಮಾನಃ-ಪ್ರಭಂಜನಃ=ಪು=೨೦-ವಾಯುವಿನ ಹೆಸರುಗಳು.

ಪ್ರಾಣಃ=ಅಪಾನಃ=ಸಮಾನಃ=ಉದಾನಃ= ವ್ಯಾನ-೫=ಇವೆ=ಇವು, ಶರೀರಸ್ಥಾಃ-ಶರೀರದಲ್ಲಿರುವ. ವಾಯುವಃ ಪಂಚವಾಯುಗಳ ಹೆಸರುಗಳು.

ಹೃದಿಪ್ರಾಣಃ- ಹೃದಯದಲ್ಲಿರತಕ್ಕ ವಾಯುವಿಗೆ ಪ್ರಾಣವಾಯುವು. ನಾಭಿಸಂಸ್ಥಿತಃ-ನಾಭಿಯಲ್ಲಿರತಕ್ಕ ವಾಯುವಿಗೆ ಸಮಾನವಾಯುವು- ಕಂಠದೇಶಸ್ಥಃ-ಕಂಠದಲ್ಲಿರತಕ್ಕವಾಯುವು -ವುದಾನವಾಯುವು, ಸರ್ವ ಶರೀರದಲ್ಲಿರತಕ್ಕ ವಾಯುವು, ವ್ಯಾನವಾಯುವು.

ನಾಗಃ-ವಾತನಾಡಿಸುವ ವಾಯುವ-ನಾಗವಾಯುವು ಕೂರ್ಮಃ-ಕಣ್ಣುತೆಗಿಸುವ ವಾಯುವು, ಕೂರ್ಮವಾಯುವು - ಕೃಕರಃ-ಶೀನುವುಂಟುಮಾಡುವ ವಾಯುವು-ಕೃಕರವಾಯುವು. ದೇವದತ್ತಃ-ಆಕಳಿ

॥ (ಶರೀರಸ್ಥಾಇವೆ)
ರಂಹ ಸ್ತರಸೀತುರಯು
ಸ್ಸ್ಯದ್ಕ್ । ಜವೊಥ
ಶೀಘ್ರಂತ್ವರಿತಂ ಲಘುಕ್ಷಿ
ಪ್ರಮುರಂದ್ರುತಂ ॥೬೪॥ ಸ
ತ್ವರಂಚಪಲಂತೂರ್ಣ ಮವಿ
ಲಂಬಿತಮಾಶುಚ।
ಸತತಾನಾರತಶಾಶ್ವಂತಸಂತ
ತಾವಿರತಾನಿಶಂ ॥೬೫॥ನಿತ್ಯಾ
ನವರತಾಜಸ್ರಮಪ್ಯ

ಥಾತಿಶಯೊಭರಕ್ । ಅತಿವೇ
ಲಭೃ (ಶಾತ್ಯರ್ಥಾತಿಮಾ
ತ್ರೊ))ದ್ಗಾಢನಿರ್ಭರ೦॥ ತೀ
ವ್ರೈ ಕಾಂತನಿತಾಂತಾನಿಗಾಢ
ಬಾಢ ದೃಢಾನಿಚ ।
ಕ್ಲೀಬೆಶೀಘ್ರಾದ್ಯಸತ್ವೆಸ್ಯಾ
ತ್ರಿ ಷ್ವೆಷಾಂ ಭೆದ್ಯಗಾಮಿಯು
ತ್॥

ಕೆ ಬರುವವಾಯುವು, ದೇವದತ್ತ ವಾಯು
ಧನಂಜಯಃ-ಪ್ರಾಣಹೊದರೂಬಿಡದೇ ಇರ
ತಕ್ಕವಾಯುವಿಗೆ=ಧನಂಜಯವಾಯುವು.
ರಂಹಃ-ಸು =ತರಃ ಸ =ಸ=ರಯಃ=
ನ=ಸ್ಯದಃ=ಜವಃ= ವು=೫= ವೇಗದೊಡ
ಗೂಡಿರುವಗಮನದ ಹೆಸರುಗಳು.
ಶೀಘ್ರಂ=ತ್ವರಿತಂ=ಲಘು-ಕ್ಷಿಪ್ರಂ=
ಅರಂ-ದ್ರುತಂ=ಸತ್ವರಂ=ಚಪಲಂ=ತೂ
ರ್ಣಂ=ಅವಿಲಂಬಿತಂ=ಆಶು-೧೧=ಶೀಘ್ರ
ದಹೆಸರುಗಳು. ಬೇಗವನ್ನುವಿಕೆ.
ಸತತಂ=ಅನಾರತಂ=ಅಶ್ರಾಂತಂ=
ಸಂತತಂ=ಅವಿರತಂ= ಅನಿಶಂ=ನಿತ್ಯಂ=
ಅನವರತಂ=ಅಜಸ್ರಂ=೮= ಎಡೆಬಿಡದ
ಕ್ರಿಯಾಕಾಲಗಳಹೆಸರುಗಳು.
ಅತಿಶಯಃ=ಭರಃ=ಅತಿವೇಲಂ=ಭೃಶಂ
ಅತ್ಯರ್ಥಂ=ಅತಿಮಾತ್ರಂ=ಉದ್ಗಾಢಂ=ನಿ
ರ್ಭರಂ=ತೀವ್ರಂ-ಏಕಾಂತಂ-ನಿತಾಂತಂ-
ಗಾಢಂ-ಬಾಢಂ =ದೃಢಂ-೧೪=ಅತಿಶಯ
ದ ಹೆಸರುಗಳು.
ಶೀಘ್ರಾದಿ-ಶೀಘ್ರಶಬ್ದ ವೊದಲಾದ ೩೦
ಅಸತ್ವೆ-ಗುಣ ವಾಚಕ ವಾದಾಗ್ಯೂ ಕ್ರಿ
ಯಾವಿಶೇಷಣವಾದಾಗ್ಯೂ-ಕ್ಲೀಬೆ-ನಪುಂ
ಸಕಲಿಂಗದಲ್ಲಿವರ್ತಿಸುವವು. ಅತಿಶಯಶ
ಬ್ದ ವೊದಲು ೧೪ ಶಬ್ದಗಳು ಗುಣವಾಚ
ಕಗಳಾದ ಪುಲ್ಲಿಂಗ-ಕ್ರಿಯಾ ವಿಶೇಷಣ
ವಾದಾಗ ನಂಪುಂಸಕ(ಏಷಾಂ)ಈ ೩೪
ಪದಗಳೊಳಗೂ (ಯತ್) ಯಾವಶಬ್ದ
ರೂಪವು (ಬೇದ್ಯಗಾಮಿ) ವಿಶೇಷ್ಯವನ್ನು

CC-0. Jangamwadi Math Collection. Digitized by eGangotri

ಹೊಂದಿರುತ್ತೆ ತತ್-ಅಂತಾಶಬ್ದವ
ತ್ರಿಷು-ಮೂರು ಲಿಂಗಗಳಲ್ಲಿಯೂ ವ
ಸುವದು.

ಕುಬೇರಸ್ತ್ರ್ಯಂಬಕಸಖೋ ಯಕ್ಷರಾಡ್ಗುಹ್ಯಕೇಶ್ವರಃ । ಮನುಷ್ಯಧರ್ಮಾಧನದೋ ರಾಜರಾಜೋಧನಾಧಿಪಃ॥ ಕಿನ್ನರೇಶೋವೈಶ್ರವಣಃಪೌಲಸ್ತ್ಯೋನರವಾಹನಃ। ಯಕ್ಷೈಕಪಿಂಗೈಲಬಿಲಶ್ರೀದಪುಣ್ಯಜನೇಶ್ವರಾಃ ।

ಕುಬೇರಃ-ತ್ರ್ಯಂಬಕಸಖಃ-ಯಕ್ಷ
ಜ ಗುಹ್ಯಕೇಶ್ವರಃ-ಮನುಷ್ಯಧರ್ಮಾ
ಣ=ಧನದಃ- ರಾಜರಾಜಃ- ಧನಾದಿಪ
ನ್ನರೇಶಃ_ವೈಶ್ರವಣಃ-ಪೌಲಸ್ತ್ಯಃ-ನ
ವಾಹನಃ=ಯಕ್ಷಃ= ಏಕಪಿಂಗಃ-ಐಲಬಿ
ಶ್ರೀದಃ- ಪುಣ್ಯಜನೇಶ್ವರಃ-ಪು=೧೭-
ಬೇರನ ಹೆಸರುಗಳು.

ಅಸ್ಯೋದ್ಯಾನಂ ಚೈತ್ರರಥಂಪುತ್ರಸ್ತು ನಲಕೂಬರಃ। ಕೈಲಾಸಸ್ಥಾನಮಲಕಾ ಪೂರ್ವಿಮಾನಂತುಪುಷ್ಪಕಂ ॥೬೦॥ ಸ್ಯಾತ್ಕಿನ್ನರಃ ಕಿಂಪುರುಷಸ್ತುರಂಗವದನೋಮಯುಃ॥

ಚೈತ್ರರಥಂ-ನ-೧-ಅಸ್ಯ ಈಕುಬೇ
ನ ಉದ್ಯಾನಂ_ತೋಟದಹೆಸರು ॥ ನಲ
ಕೂಬರಃ-ಪು_(ಅಸ್ಯಪುತ್ರಃ) ಈತನ
ಗನಹೆಸರು. ಕೈಲಾಸಃ=ಪು=೧- (ಅಸ್ಯ
ಸ್ಥಾನಂ) ಈತನಿರುವಸ್ಥಳ_ಅಲಕಾಪು
ಸ್ತ್ರೀ-೧-ಅಸ್ಯಪೂಃ) ಈತನಪಟ್ಟಣ
ಪುಷ್ಪಕಂ-೧-(ಅಸ್ಯವಿಮಾನಂ) ಈತನ
ಮಾನದಹೆಸರು. ಕಿನ್ನರಃ-ಕಿಂಪುರು
ತುರಂಗವದನಃ-ಮಯುಃ-ಉ_೪-ಪು
ನ್ನರರಹೆಸರುಗಳು - ಕೆಲವರೀನಾ
ನ್ನೂ ನಾಲ್ಕುಜಾತಿಗಳನುವರು.

ನಿಧಿರ್ನಾ ಶೇವಧಿರ್ಭೇದಾಃಪದ್ಮಶಂಖಾದಯೋನಿಧೇಃ ॥೭೧॥ ಮಹಾಪದ್ಮಶ್ಚ ಪದ್ಮಶ್ಚಶಂಖೋ ಮಕರಕಚ್ಛಪೌ। ಮುಕುಂದಃಕುಂದನೀಲೌಚ ವರಶ್ಚನಿಧಯೋನವ ।

ನಿಧಿಃ=ಶೇವಧಿಃ=ಪಾ=ನೇಪಧಿಃ=
ಡೂ=ನ=ಪುಲ್ಲಿಂಗಗಳು -ಪದ್ಮಶಂಖ
ಯಃ-ಪು_ ಪದ್ಮವುಶಂಖವುಮೊದಲ
ಗಳು= ನಿಧಃ- ನಿಧಿಯಭೇದಾಃ-
ಳು ॥ ಮತ್ತು= ಮಹಾಪದ್ಮಃ=ಪದ್ಮ
ಶಂಖಃ-ಮಕರಃ-ಕಚ್ಛಪಃ_ ಮುಕುಂ

CC-0. Jangamwadi Math Collection. Digitized by eGangotri

ಇತಿ ಸ್ವರ್ಗವರ್ಗಃ

—*—

ದ್ಯೋದಿವೌದ್ವೇ ಸ್ತ್ರಿಯಾಮಭ್ರಂ ವ್ಯೋಮಪುಷ್ಕರಮಂಬರಂ । ನಭೋಂತರಿಕ್ಷಂಗಗನಮನಂತಂ ಸುರವರ್ತ್ಮಖಂ ॥ ವಿಯದ್ವಿಷ್ಣು ಪದಂ ವಾತು ಪುಂಸ್ಯಾಕಾಶ ವಿಹಾಯಸೀ ॥ ವಿಹಾಯಸೋ ಪಿನಾಕೋಪಿ ನಸ್ತ್ಯುರಪಿಸ್ಯಾತ್ತ್ರದವ್ಯಯಂ । (ತಾರಾಪಥಶ್ಶಬ್ದಗುಣೋಮೇಘದ್ವಾರಂಮಹಾಬಿಲಂ॥

ಇತಿ ವ್ಯೋಮವರ್ಗಃ

—*—

ದಿಶಸುಕಕುಭಃಕಾಷ್ಠಾಆಶಾಶ್ಚಹರಿತಶ್ಚತಾಃ ॥೩॥

ಪ್ರಾಚ್ಯವಾಚೀ ಪ್ರತೀಚ್ಯಸ್ತಾಃಪೂರ್ವದಕ್ಷಿಣಪಶ್ಚಿಮಾ। ಉತ್ತರಾದಿಗುದೀಚೀಸ್ಯಾ॥

ದಿಶ್ಯಂತುತ್ರಿಷುದಿಗ್ಭವೇ॥೪॥

ಕುಂದಃ=ನೀಲಃ= ವರಃ-೯-ಪು-ಇವ್ರುನವ ನಿಧಿಗಳು

ಇತಿ=ಈ ಪ್ರಕಾರವಾಗಿ, ಸ್ವರ್ಗವರ್ಗಃ ಸ್ವರ್ಗಕ್ಕೆ ಸೇರಿದ ಶಬ್ದಗಳ ಗುಂಪು ಹೇಳಲ್ಪಟ್ಟಿತು.

—*—

ದ್ಯೌಃ=೦=ದಿವ್-ವ್-೨=ಸ್ತ್ರೀ-ಅಭ್ರಂ-ವ್ಯೋಮ-ನಪುಷ್ಕರಂ-ಅಂಬರಂ-ನಭ-ಸ-ಅಂತರಿಕ್ಷಂ-ಗಗನಂ-ಅನಂತಂ=ಸುರವರ್ತ್ಮ-ನ-ಖಂ-ವಿಯತ್-ತು- ವಿಷ್ಣುಪದಂ-ನ-ಆಕಾಶಂ- ವಿಹಾಯಃ-ಸ-ಪ್ಣ-ಪ್ನ-೧೬-ಆಕಾಶದ ಹೆಸರುಗಳು; ಮತ್ತು ವಿಹಾಯಸಃ -ನಾಕಃ -೨- ಅಪು-ದ್ಯುಃಅವ್ಯಯ-ತಾರಾಪಥಃ-ಪು-ಶಬ್ದಗುಣಃ-ಮೇಘದ್ವಾರಂ- ಮಹಾಬಿಲಂ-ಸ-೩-ಆಕಾಶದ ಹೆಸರುಗಳು.

—*—

ದಿಶಃ-ಶ- ಕಕುಭಃ= ಬ-ಕಾಷ್ಠಾಃ-ಆಶಾಃ-೨-ಆ- ಹರಿತಃ-ತು-ಸ್ತ್ರೀ-೫=ದಿಕ್ಕುಗಳ ಸಾಮಾನ್ಯ ನಾಮಗಳು.

ಪ್ರಾಚೀ-ಅವಾಚೀ ॥ಪಾ॥ ಅಪಾಚೀ- ಪ್ರತೀಚೀ=ಈ ೩ (ಪೂರ್ವದಕ್ಷಿಣಪಶ್ಚಿಮಾಃ-ಕ್ರಮದಿಂ ಮೂಡಲು-ತೆಂಕಲು-ಪಡುವಲುಗಳೆಂಬ-(ಮೂರು) ಈ ದಿಕ್ಕುಗಳ ಹೆಸರುಗಳು. ಉದೀಚೀ-ಸ್ತ್ರೀ-೧-ಉತ್ತರದಿಕ್-ಬಡಗಲೆಂಬುದರ ಹೆಸರು.

ದಿಶ್ಯಂ-ತ್ರಿ-೧-(ದಿಗ್ಭವೆ) ದಿಕ್ಕುಗಳಲ್ಲಿ

CC-0. Jangamwadi Math Collection. Digitized by eGangotri

ಅವಾಗ್ಭವಮವಾಚೀನ ಮು ದೀಚೀನಮುದಗ್ಭವಂ । ಪ್ರತ್ಯಗ್ಭವಂಪ್ರತೀಚೀನಂಪ್ರಾಚೀನಂಪ್ರಾಗ್ಭವಂತ್ರಿಷು ॥

ಹುಟ್ಟಿದ ವಸ್ತುವಿನ ಹೆಸರು. ಮತ್ತು ವಾಗ್ಭವಂ-೧ (ಅವಾಚೀನಂ) ತೆಂಕಲ್ಲಿ ಹುಟ್ಟಿದ್ದು. ಉದೀಚೀನಂ-೧=ಉದಗ್ಭವಂ)ಬಡಗಲಲ್ಲಿ ಹುಟ್ಟಿದ್ದು. ಪ್ರತ್ಯಗ್ಭ ಪ್ರತ್ಯಗ್ಭವಂ-೧ (ಪ್ರತೀಚೀನಂ ಪಡು ಲಲ್ಲಿ ಹುಟ್ಟಿದ್ದು. ಪ್ರಾಚೀನಂ-೧-ಪ್ರಾಗ್ಭವಂ) ಮೂಡಲಲ್ಲಿ ಹುಟ್ಟಿದ್ದು. ೪ (ತ್ರಿಷು) ಮೂರುಲಿಂಗಗಳಲ್ಲಿಯೂ ತ್ತಿಸುತ್ತವೆ.

ಇಂದ್ರೋವಹ್ನಿಃಪಿತೃಪತಿ ರ್ನೈರ್ಋತೋ ವರುಣೋಮರುತ್ । ಕುಬೇರಈಶಃಪತಯಃ। ಪೂರ್ವಾದೀನಾಂ ದಿಶಾಂಕ್ರಮಾತ್॥

ಇಂದ್ರಃ-ವಹ್ನಿಃ= ಪಿತೃಪತಿಃ-ಇ-ಋತಃ- ವರುಣಃ- ಮರುತ್-ತು=ಕುಬೇರಃ-ಈಶಃಪು-V- (ಕ್ರಮಾತ್) ಕ್ರಮವಾಗಿ]ಪೂರ್ವಾದೀನಾಂದಿಶಾಪತಯಃ) ಕ್ಕುಗಳೊಡಗೂಡಿದ ಮೂಡಲು ಮುಂತಾದ ದಿಕ್ಕುಗಳಿಗಧಿಪತಿಗಳು ಅಂದರೆ, ಷ್ಟದಿಕ್ಪಾಲಕರು.

ಐರಾವತಃಪುಂಡರೀಕೋವಾಮನಃಕುಮುದೋಂಜನಃ।ಪುಷ್ಪದಂತಸ್ಸಾರ್ವಭೌಮಸ್ಸುಪ್ರತೀಕಶ್ಚದಿಗ್ಗಜಾಃ ॥೨೬॥

ಐರಾವತಃ- ಪುಂಡರೀಕಃ=ವಾಮನಃ ಕುಮುದಃ-ರಾಜನಃ-ಪುಷ್ಪದಂತಃ=ಸಾರ್ವಭೌಮಃ- ಸುಪ್ರತೀಕಃ-ಪು=V-ದಿಗ್ಗಜಾಃ-ಕ್ರಮವಾಗಿ ಅಷ್ಟದಿಗ್ಗಜಗಳ ಹೆಸರುಗಳು.

ಕರಿಣ್ಯೋಭ್ರಮುಃಕಪಿಲಾಪಿಂಗಳಾನುಪಮಾಕ್ರಮಾತ್॥ ತಾಮ್ರಪರ್ಣೀ ಶುಭ್ರದಂತೀ ಚಾಂಗನಾಚಾಂಜನಾವತೀ ॥

ಅಭ್ರಮುಃ-ಕಪಿಲಾ-ಪಿಂಗಳಾ=ಅನುಪಮಾ-ತಾಮ್ರಪರ್ಣೀ-ತಾಮ್ರಕರ್ಣೀ ಶುಭ್ರದಂತೀ-ಅಂಗನಾ=ಅಂಜನಾವತೀ ಸ್ತ್ರೀ-V-ಕ್ರಮಾತ್=ಕ್ರಮದಿಂದ ರಿಣ್ಯಃ-ಅಷ್ಟದಿಗ್ಗಜಗಳ ಭಾರ್ಯೆಯರ ಸರುಗಳು.

ಕ್ಲೀಬಾವ್ಯಯಂತ್ವಪದಿಶಂ

ಅಪದಿಶಂ-ನ-ಅವ್ಯಯವು-ವಿಧಿ

CC-0. Jangamwadi Math Collection. Digitized by eGangotri

ದಿಶೋರ್ಮಧ್ಯೇ ವಿದಿಕ್ಸ್ತ್ರಿಯಾಂ । ಅಭ್ಯಂತರಂ ತ್ವಂತರಾಳಂ ಚಕ್ರವಾಳಂ ತು ಮಂಡಲಂ॥

ಸ್ತ್ರೀ-೧-ದಿಶೋರ್ಮಧ್ಯೇ ಎರಡುದಿಕ್ಕುಗಳ ನಡುವೆಇರುವ ಮೂಲೆಗಳ ಹೆಸರುಗಳು. ಅಭ್ಯಂತರಂ-ಅಂತರಾಳಂ-ನ-೨-ಮಧ್ಯ ಪ್ರದೇಶದ ಹೆಸರುಗಳು. ಚಕ್ರವಾಳಂ-ಮಂಡಲಂ-ನ-೨-ಮಂಡಲಾಕಾರದಿಂ ಗುಡಾಗಿರುವ ವಸ್ತುವಿನ ಹೆಸರುಗಳು.

ಅಭ್ರಂಮೇಘೋ ವಾರಿವಾಹಸ್ತನಯಿತ್ನುರ್ಬಲಾಹಕಃ । ಧಾರಾಧರೋ ಜಲಧರಸ್ತಟಿತ್ವಾನ್ವಾರಿದೋಽಂಬುಭೃತ್ ॥ ಘನಜೀಮೂತಮುದಿರಜಲಮುಗ್ಧೂಮಯೋನಯಃ ॥

ಅಭ್ರಂ-ನ-ಮೇಘಃ-ವಾರಿವಾಹಃ-ಸ್ತನಯಿತ್ನುಃ-ಬಲಾಹಕಃ-ಧಾರಾಧರಃ-ಜಲಧರಃ-ತಟಿತ್ವಾನ್-ತು-ವಾರಿದಃ-ಅಂಬುಭೃತ್-ಘನಃ-ಜೀಮೂತಃ-ಮುದಿರಃ-ಜಲಮುಕ್-ಚ-ಧೂಮಯೋನಿಃ-ಪು-೧೫-ಮೇಘಗಳಹೆಸರುಗಳು.

ಕಾದಂಬಿನೀಮೇಘಮಾಲಾತ್ರಿಷುಮೇಘಭವೇಽಭ್ರಿಯಂ ॥ ಸ್ತನಿತಂಗರ್ಜಿತಂ ಮೇಘನಿರ್ಘೋಷೇರಸಿತಾದಿಚ ಶಂಪಾಶತಹ್ರದಾಹ್ರಾದಿನ್ಯೈರಾವತ್ಯಕ್ಷಣಃ ಪ್ರಭಾತಟಿತ್ಸೌದಾಮಿನೀವಿದ್ಯುಚ್ಚಂಚಲಾಚಪಲಾಪಿಚ । ಸ್ಫೂರ್ಜಥುರ್ವಜ್ರನಿರ್ಘೋಷೋ ಮೇಘಜ್ಯೋತಿರಿರಂಮದಃ॥

ಕಾದಂಬಿನೀ-ಮೇಘಮಾಲಾ-ಸ್ತ್ರೀ-೨-ಮೇಘಪಜ್ತಿಯ ಹೆಸರುಗಳು. ಅಭ್ರಿಯಂ-ತ್ರಿ-೧-ಮೇಘಭವೆ-ಮೇಘದಲ್ಲಿ ಹುಟ್ಟಿದ ಜಲಾದಿಗಳ ಹೆಸರು. ಸ್ತನಿತಂ ಗರ್ಜಿತಂ - ರಸಿತಂ- ನ -೩- ಮೇಘನಿರ್ಘೋಷಃ-ಮೇಘಗಳ ಗರ್ಜನೆ ಅಂದರೆ, ಗುಡುಗಿನ ಹೆಸರುಗಳು. ಆದಿಶಬ್ದದಿಂದ-ಸ್ವನಿತಂ-ಧ್ವನಿತಂ -೨-ನ- ಗುಡುಗುಗಳು. ಶಂಪಾ-ಪಾ-ಸಂಪಾ-ಶತಹ್ರದಾ-ಹ್ರಾದಿನೀ-ಐರಾವತೀ-ಕ್ಷಣಪ್ರಭಾ-ತಟಿತ್-ಸೌದಾಮಿನೀ-ವಿದ್ಯುತ್-ತು-ಚಂಚಲಾ-ಚಪಲಾ-ಸ್ತ್ರೀ-೧೦-ಮಿಂಚುಗಳ ಹೆಸರುಗಳು ॥. ಸ್ಫೂರ್ಜಥುಃ-ವಜ್ರನಿರ್ಘೋಷಃ-ಪು-ವಜ್ರನಿಷ್ಪೇಷಃ-ವಜ್ರ ಘ

CC-0. Jangamwadi Math Collection. Digitized by eGangotri

ಟ್ಟುಸದಿಂದಾದ ಶಬ್ದದ ಹೆಸರು. ಅಂದರೆ ಸಿಡಿಲಧ್ವನಿ ಮೇಘಜ್ಯೋತಿಃ-ಸ್-ನ-ಇರಂಪಾದಃ-ಪು-೨-ಮೇಘದೊಳಗಿರುವ ತೇಜಸ್ಸಿನ ಹೆಸರುಗಳು.

ಇಂದ್ರಾಯುಧಂ ಶಕ್ರಧನುಸ್ತದೇವರ್ಜುರೋಹಿತಂ ।

ಇಂದ್ರಾಯುಧಂ-ಶಕ್ರಧನುಃ-ಷ್-ನ-೨-ಇಂದ್ರಧನುಸ್ಸಿನ ಹೆಸರು ಅಂದರೆ ಸುರಚಾಪ ವೆಂಬಆಕಾಶಬಿಲ್ಲು-ರೋಹಿತಂ-ನ-೧- ಋಜು-ನೆಟ್ಟಗಿರುವ-ತದೇವ-ಆ ಬಿಲ್ಲಿನಹೆಸರು.

ವೃಷ್ಟಿರ್ವರ್ಷಂ ತದ್ವಿಘಾತೇ ವಗ್ರಹಾವಗ್ರಹೌ ಸಮೌ ॥

ವೃಷ್ಟಿಃ-ಸ್ತ್ರೀ-ವರ್ಷಂ-ನ-೨-ಮಳೆಯ ಹೆಸರುಗಳು. ವಗ್ರಹಃ-ಅವಗ್ರಹಃ-ಪು-೨-ತದ್ವಿಘಾತೇ। ಆವರ್ಷದ ವಿಘ್ನದಲ್ಲಿ ಅಂದರೆ ಅನಾವೃಷ್ಟಿಯ ಹೆಸರು.

ಧಾರಾಸಂಪಾತಆಸಾರಃ ಶೀಕರೋಂಬುಕಣಾಸ್ಸ್ಮೃತಾಃ । ವರ್ಷೋಪಲಸ್ತು ಕರಕಾ ಮೇಘಚ್ಛನ್ನೇಹ್ನಿ ದುರ್ದಿನಂ ॥V೫॥

ಧಾರಾಸಂ-ಪಾತಃ-ಆಸಾರಃ-ಪು-೨-ಜಡಬಿಡದೆ ಸುರಿಯುವ ಜಡಿಮಳೆಯ ಹೆಸರುಗಳು. ಶೀಕರಃ-ಅಂಬು ಕಣಃ-ಪು-೨ ತುಂತುರಿಗಳ ಹೆಸರುಗಳು ವರ್ಷೋಪಲಃ-ಕರಕಾ-ಸ್ತ್ರೀ-ಪಾ-ಕರಕಃ-ಪು-೨-ಆನೆಕಲ್ಲಿನ ಹೆಸರುಗಳು. ದುರ್ದಿನಂ-ನ-೧ ಮೇಘಚ್ಛನ್ನೇ-ಮೇಘದಿಂದ ಮುಚ್ಚಲ್ಪಟ್ಟ-ಅಹ್ನಿ-ದಿನದಲ್ಲಿ- ಅಂದರೆ-ಮೋಡಮುಚ್ಚಿರುವ ದಿವಸದಹೆಸರು.

ಅಂತರ್ಧಾ ವ್ಯವಧಾ ಪುಂಸಿತ್ವಂತರ್ಧಿರಪವಾರಣಂ। ಅಪಿಧಾನ ತಿರೋಧಾನ ಪಿಧಾನಾಚ್ಛಾದನಾನಿಚ ॥V೬॥

ಅಂತರ್ಧಾ-ವ್ಯವಧಾ-ಸ್ತ್ರೀ-ಅಂತರ್ಧಿಃ-ಪು-ಅಪವಾರಣಂ-ಅಪಿಧಾನಂ-ತಿರೋಧಾನಂ-ಪಿಧಾನಂ -ಆಚ್ಛಾದನಂ-ನ-V-ಹೊದಿಕೆ-ಅಥವಾ ಮುಚ್ಚುವಿಕೆ, ಮುಚ್ಚಳದ ಹೆಸರುಗಳು.

CC-0. Jangamwadi Math Collection. Digitized by eGangotri

ಹಿಮಾಂಶುಶ್ಚಂದ್ರಮಾಶ್ಚಂದ್ರ ಇಂದುಃ ಕುಮುದಬಾಂಧವಃ ವಿಧುಸ್ಸುಧಾಂಶುಃ ಶುಭ್ರಾಂಶು ರೋಷಧೀಶೋನಿಶಾಪತಿಃ । ಅಬ್ಜೋಜೈವಾತೃಕಸ್ಸೋಮೋಗ್ಲೌರ್ಮೃಗಾಂಕಃಕಲಾನಿಧಿಃ । ದ್ವಿಜರಾಜಶ್ಶಶಧರೋನಕ್ಷತ್ರೇಶಃಕ್ಷಪಾಕರಃ ॥೪೭॥

ಹಿಮಾಂಶುಃ-ಚಂದ್ರಮಾಃ-ಸ್-ಚಂದ್ರಃ - ಇಂದುಃ- ಕುಮುದಬಾಂಧವಃ-ವಿಧುಃ-ಸುಧಾಂಶುಃ-ಶುಭ್ರಾಂಶುಃ-ಓಷಧೀಶಃ-ನಿಶಾಪತಿಃ- ಅಬ್ಜಃ - ಜೈವಾತೃಕಃ-ಸೋಮಃ-ಗ್ಲೌಃ-ಓ- ಮೃಗಾಂಕಃ-ಕಲಾನಿಧಿಃ-ದ್ವಿಜರಾಜಃ-ಶಶಧರಃ-ನಕ್ಷತ್ರೇಶಃ-ಕ್ಷಪಾಕರಃ-ಪು-೨೦-ಚಂದ್ರನ ಹೆಸರುಗಳು.

ಕಲಾತುಷೋಡಶೋ ಭಾಗೋಬಿಂಬೋಸ್ತ್ರೀ ಮಂಡಲಂತ್ರಿಷು ॥

ಕಲಾ-ಸ್ತ್ರೀ-ಷೋಡಶೋಭಾಗಃ-ಹದಿನಾರನೇ ಅಂಶ ಅಂದರೆ-ಚಂದ್ರನಲ್ಲಿ ಪೀಸಪಾಲು. ಬಿಂಬಃ-ಪ್ನ-ಮಂಡಲಂ-ತ್ರಿ-೨ ಚಂದ್ರಸೂರ್ಯಮಂಡಲಗಳ ಹೆಸರುಗಳು॥

ಭಿತ್ತಂಶಕಲಖಂಡೇ ವಾ ಪುಂಸ್ಯರ್ಧೋರ್ಧಂ ಸಮೇಂಶಕೇ ॥ ಚಂದ್ರಿಕಾಕೌಮುದೀಜ್ಯೋತ್ಸ್ನಾಪ್ರಸಾದಸ್ತುಪ್ರಸನ್ನತಾ । ಕಳಂಕಾಂಕೌಲಾಂಛನಂ ಚಚಿಹ್ನಂಲಕ್ಷ್ಮಚಲಕ್ಷಣಂ ॥೪೮॥

ಬಿತ್ತಂ-ನ-ಶಕಲಂ- ಖಂಡಂ-ಪ್ನ-ಅರ್ಧಂ ೪-ಮುರುಕುಚೂರುಗಳಹೆಸರು-ಅರ್ಧಂ ಸಮೇಂಶಕೇ ಸಮವಾದ ಭಾಗವನ್ನು ಹೇಳುವಾಗ, ಅರ್ಧಂ ಎಂದು ನಪುಂಸಕ ಲಿಂಗವಾಗುತ್ತೆ. ಚಂದ್ರಿಕಾ-ಕೌಮುದೀ-ಜ್ಯೋತ್ಸ್ನಾ=ಸ್ತ್ರೀ=೩=ಬೆಳದಿಂಗಳ ಹೆಸರುಗಳು= ಕಳಂಕಃ=ಅಂಕಃ=ಪು=ಲಾಂಛನಂ=ಚಿಹ್ನಂ=ಲಕ್ಷ್ಮ=ನ=ಲಕ್ಷಣಂ=ನ

ಪ್ರಜ್ಞಾನಂಚಾಪ್ಯಭಿಜ್ಞಾನಂ ಲಲಾಮಂಚಲಲಾಮಚ॥ ಸುಷಮಾ ಪರಮಾಶೋಭಾ ಶೋಭಾ ಕಾಂತಿರ್ದ್ಯುತಿಶ್ಛವಿಃ ಅವಶ್ಯಾಯಸ್ತುನೀಹಾರಸ್ತುಷಾರಸ್ತು ಹಿನಂಹಿಮಂ

ಪ್ರಜ್ಞಾನಂ=ಚ=ಅಭಿಜ್ಞಾನಂ=ಲಲಾಮಂ=ಚ=ಲಲಾಮ=ಚ= ಇವುಗಳು ೯ಗಳು ಹೆಸರು.. =೯=ಗುರುತಿನ ಹೆಸರುಗಳು=ಸುಷಮಾ ಸ್ತ್ರೀ=ಪರಮಾ=ಅಧಿಕವಾದ=ಶೋಭಾ= ಕಾಂತಿಃ = ದ್ಯುತಿಃ=ಛವಿಃ=ಸ್ತ್ರೀ-೬

CC-0. Jangamwadi Math Collection. Digitized by eGangotri

ಸ್ವರ್ಭಾನುಸ್ಸೈಂಹಿಕೇಯೋ ವಿಧುಂತುದಃ॥

ಅರ್ಕಜಃ=ಇವುಕನಿಯಹೆಸರುಗಳು
ತಮಃ=ಪು=ರಾಹುಃ=ಸ್ವರ್ಭಾನುಃ
ಸೈಂಹಿಕೇಯಃ=ವಿಧುಂತುದಃ=ಪು=
ರಾಹುವುವಿನಹೆಸರುಗಳು,

(ಸಪ್ತರ್ಷಯೋಮರೀಚ್ಯತ್ರಿಮುಖಾಶ್ಚಿತ್ರಶಿಖಂಡಿನಃ॥

ಮರೀಚ್ಯತ್ರಿಮುಖಾಃ=ಮರೀಚಿ ಅತ್ರಿ
ಮೊದಲಾದ-ಸಪ್ತರ್ಷಯಃ=ಕಶ್ಯಪಾದಿ
ಪ್ತರ್ಷಿಗಳು-ಚಿತ್ರಶಿಖಂಡಿನಃ=ಪು=
ಬ=ಚಿತ್ರಶಿಖಂಡಿಗಳೆನ್ನಲ್ಪಡುವರು.

ರಾಶೀನಾಮುದಯೋಲಗ್ನಂ ತೇತುಮೇಷವೃಷಾದಯಃ॥

ಲಗ್ನಂ=ನ=೧=ಲಗ್ನವು=ರಾಶೀನಾಮ್
ಮೇಷಾದಿಗಳ=ಉದಯಃ=ಉದಯಿಸು
ಕೆ=ತೇತು.ಆರಾಶಿಗಳಾದರೆ=ಮೇಷವೃಷಾ
ಯಃ=ಮೇಷವೃಷಭಮುಂತಾದಹನ್ನೆರಡು
ರಾಶಿಗಳು=ಅಂದರೆ ೨೭ನಕ್ಷತ್ರಗಳು೧೦೮
ಪಾದಗಳಲ್ಲಿ=ಒಕ್ಕೊರಾಶಿಮೇರಿಗೆ ಅವುಗ
ಲ್ಲಿಹಗಲು= ೬ =ರಾತ್ರಿ=೬ =ಒಂದರ
ಗೊಂದು ಉದಿಸುತ್ತವೆ=ಇದ್ದರಿಂದ ಯಾ
ವಕಾಲದಲ್ಲಿಯೂ=ವರಾಶಿಉದಿಸುತ್ತೋ
ಆಗಳಿದುಲಗ್ನವಹುದು

ಸೂರಸೂರ್ಯಾರ್ಯಮಾದಿತ್ಯ ದ್ವಾದಶಾತ್ಮದಿವಾಕರಾಃ॥ಭಾಸ್ಕರಾಹಸ್ಕರಬ್ರಧ್ನ ಪ್ರಭಾಕರವಿಭಾಕರಾಃ। ಭಾಸ್ವದ್ವಿವಸ್ವತ್ಸಪ್ತಾಶ್ವ ಹರಿದಶ್ವೋಷ್ಣರಶ್ಮಯಃ॥೧೧॥ ವಿಕರ್ತನಾರ್ಕಮಾರ್ತಾಂಡಮಿಹಿರಾರುಣಪೂಷಣಃ। ದ್ಯುಮಣಿಸ್ತರಣಿರ್ಮಿತ್ರಶ್ಚಿತ್ರಭಾನುರ್ವಿರೋಚನಃ॥೧೨॥ ವಿಭಾವಸುರ್ಗ್ರಹ

ಸೂರಃ॥ಪು॥ಶೂರಃ=ಸೂರ್ಯಃ=ಅರ್
ಮಾ=ಣ್=ಆದಿತ್ಯಃ-ದ್ವಾದಶಾತ್ಮಾ=ನ್=ದಿ
ವಾಕರಃ-ಭಾಸ್ಕರಃ=ಅಹಸ್ಕರಃ=ಬ್ರಧ್ನಃ
ಪ್ರಭಾಕರಃ=ವಿಭಾಕರಃ-ಭಾಸ್ವಾನ್=ತ್=
ವಿವಸ್ವಾನ್=ತ್= ಸಪ್ತಾಶ್ವಃ=ಹರಿದಶ್ವಃ
-ಉಷ್ಣರಶ್ಮಿಃವಿಕರ್ತನಃ=ಅರ್ಕಃಮಾರ್ತಾಂ
ಡಃಮಿಹಿರಃಅರುಣಃ=ಪೂಷಾ=ನ್=ದ್ಯುಮ
ಣಿಃ=ತರಣಿಃ=ಮಿತ್ರಃ= ಚಿತ್ರಭಾನುಃವಿ
ರೋಚನಃ=ವಿಭಾವಸುಃಗ್ರಹಪತಿಃ=
ಷಾಂಪತಿಃ= ಅಹರ್ಪತಿಃಭಾನುಃ=ಹಂಸ

CC-0. Jangamwadi Math Collection. Digitized by eGangotri

ಪತಿಸ್ತ್ವಿಷಾಂ ಪತಿರಹಃಪತಿ।
ಭಾನುರ್ಹಂಸಸ್ಸಹಸ್ರಾಂಶು
ಸ್ತಪನಸ್ಸವಿತಾರವಿಃ॥೧೦೩॥
ಕರ್ಮಸಾಕ್ಷೀ ಜಗಚ್ಚಕ್ಷುರಂ
ಶುಮಾಲೀತ್ರಯೀತನುಃ। ಪ್ರ
ದ್ಯೋತನೋದಿನಮಣಿಃಖದ್ಯೋ
ತೋ ಲೋಕಬಾಂಧವಃ। ಸುರೋ
ತ್ತಮೋಧಾಮ ನಿಧಿಃಪದ್ಮಿನೀ
ವಲ್ಲಭೋಹರಿಃ॥

ಮಾಠರಃಪಿಂಗಳೋ ದಂಡ
ಶ್ಚಂಡಾಂಶೋಃಪಾರಿಪಾರ್ಶ್ವ
ಕಾಃ = ಸೂರಸೂತೋರು
ಣೋನೂರುಃ –ಕಾಶ್ಯಪಿರ್ಗ
ರುಡಾಗ್ರಜಃ॥೧೦೪॥ಪರಿವೇಷ
ಸ್ತು ಪರಿಧಿರುಪಸೂರ್ಯಕ
ಮಂಡಲೆ। ಕಿರಣೋಸ್ರಮ
ಯೂಖಾಂಶುಗಭಸ್ತಿಘೃಣಿ
ಘೃಷ್ಟಯಃ॥೧೦೫॥ಭಾನುಃ
ಕರೋಮರೀಚಿಃಸ್ತ್ರೀಪುಂಸ
ಯೋರ್ದೀಧಿತಿಃಸ್ತ್ರಿಯಾಂ।
ಸ್ಯುಃಪ್ರಭಾರುಗ್ರುಚಿ
ಸ್ತ್ವಿಡ್ಭಾಭಾಶ್ಛವಿದ್ಯುತಿದೀ
ಪ್ತಯಃ। ರೋಚಿಶ್ಶೋಚಿರುಭೇಕ್ಲೀ
ಬೇಪ್ರಕಾಶೋದ್ಯೋತಆತಪಃ
ಕೋಷ್ಣಂಕವೋಷ್ಣಂಮಂದೋ
ಷ್ಣಂಕದುಷ್ಣಂತ್ರಿಷುತದ್ವ

ಸಹಸ್ರಾಂಶುಃ_ತಪ
ನಃ-ಸವಿತಾ=ಖು=ರವಿಃ=ಫು=೩೭ಸೂರ್ಯ
ನಹೆಸರುಗಳು. ಮತ್ತು,ಕರ್ಮಸಾಕ್ಷೀ=
ಜಗಚ್ಚಕ್ಷುಃ =ಅಂಶುಮಾಲೀ=ತ್ರಯೀತ
ನುಃ =ಪ್ರದ್ಯೋತನಃ =ದಿನಮಣಿಃ =ಖ
ದ್ಯೋತಃಲೋಕಬಾಂಧವಃ =ಸುರೋತ್ತಮಃ
ಧಾಮನಿಧಿಃ=ಪದ್ಮಿನೀವಲ್ಲಭಃ=ಹರಿಃ-೧೨-
ಸೂರ್ಯನಾಮಂಗಳು,

ಮಾಠರಃ-ಪಿಂಗಳಃ-ದಂಡಃ=ಚಂಡಾಂ
ಶೋಃ =ಸೂರ್ಯನ-ಪಾರಿಪಾರ್ಶ್ವಕಾಃ =ಪಾ
ರ್ಶ್ವದೊಳಗಿರುವ ಅಂಗದೇವತೆಗಳಹೆಸ
ರುಗಳು. ಸೂರಸೂತಃ=ಅರುಣಃ=ಅನೂ
ರುಃ=ಕಾಶ್ಯಪಿಃ=ಗರುಡಾಗ್ರಜಃ =೫=ಸೂ
ರ್ಯಸಾರಥಿಯಾದ ಅರುಣನಹೆಸರುಗಳು.
ಪರಿವೇಷಃ =ಪರಿಧಿಃ =ಫು=೨=ಸೂರ್ಯಪರಿ
ವೆಷವೆಂಬ ಗಗನಗುಡಿಯಹೆಸರುಗಳು.=
ಉಪಸೂರ್ಯಕಂ -ಮಂಡಲಂ-ನ-೨ಪ್ರತಿ
ಸೂರ್ಯನ ಹೆಸರುಗಳು! ಅಂದರೆ ಸೂ
ರ್ಯಪ್ರತಿಬಿಂಬವು. ಪರಿವೆಷಶಬ್ದವು ಮೊ
ದಲು=೪=ಶಬ್ದಗಳೂಪರಿವೇಷದ ಹೆಸರೆಂ
ತಲೇಕೆಲವರನ್ನುವರು॥ಕಿರಣಃ=ಉಸ್ರಃ_
ಮಯೂಖಃ ಅಂಶುಃ=ಗಭಸ್ತಿಃ=ಘೃಣಿಃ=
ಘೃಷ್ಟಿಃ=ಭಾನುಃ=ಕರಃ=೨=ಮರೀಚಿಃ
ಪ್ಸ=ದೀಧಿತಿಃ=ಸ್ತ್ರೀ=೧೧=ಸೂರ್ಯ ಕಿರ
ಣದ ಹೆಸರುಗಳು. ಪ್ರಭಾ=ರುಕ್=ಚ್=ರು
ಚಿಃ=ತ್ವಿಟ್=ಷ=ಭಾ=ಭಾಃ =ಸ್=ಛವಿಃ =
ದ್ಯುತಿಃ=ದೀಪ್ತಿಃ=ಸ್ತ್ರೀ=ರೋಚಿಃ=ಸ್ನ

CC-0. Jangamwadi Math Collection. Digitized by eGangotri

ಬ-ಹಗಲಿನಆದ್ಯಂತಮಧ್ಯಕಾಲಗಳಸಮೂಹದಹೆಸರು. ಅಂದರೆ ಬೆಳಿಗ್ಗೆ-ಮಧ್ಯಾಹ್ನ-ಸಂಜೆ ಈ ಮೂರರಕ್ಕೂಹೆಸರಾಗಿರುವುದು

ಮಥಶರ್ವರೀ! ನಿಶಾನಿಶೀಥಿನೀರಾತ್ರಿಸ್ತ್ರಿಯಾಮಾಕ್ಷಣದಾಕ್ಷಪಾವಿಭಾವರೀತಮಸ್ವಿನ್ಯೌರಜನೀ ಯಾಮಿನೀತಮೀ

ಶರ್ವರೀ-ನಿಶಾ=ನಿಶೀಥಿನೀ=ರಾತ್ರಿಃ=ತ್ರಿಯಾಮಾ=ಕ್ಷಣದಾ=ಕ್ಷಪಾ-ವಿಭಾವರೀ ತಮಸ್ವಿನೀ=ರಜನೀ=ಯಾಮಿನೀ=ತಮೀ ಷಾ=ತಮಾ=ಸ್ತ್ರೀ-೧೨ ರಾತ್ರಿಯ ಹೆಸರುಗಳು.

ತಮಿಸ್ರಾತಾಮಸೀರಾತ್ರಿ

ತಮಿಸ್ರಾ-ಸ್ತ್ರೀ=೧= ತಾಮಸೀರಾತ್ರಿಃ ಗಾಢಾಂಧಕಾರವಾದ ರಾತ್ರಿಯ ಹೆಸರು. ಅಂದರೆ:ಕಾರ್ಗತ್ತಲೆಯುಳ್ಳದ್ದು=

ಜ್ಯೋತ್ಸ್ನೀ ಚಂದ್ರಿಕಯಾನ್ವಿತಾ ।೧೧೨

ಜ್ಯೋತ್ಸ್ನೀಸ್ತ್ರೀ -೧ = ಚಂದ್ರಿಕಯಾ ಬೆಳದಿಂಗಳೊಳಗೆ(ಅನ್ವಿತಾ) ಕೂಡಿದರಾತ್ರಿಯ ಹೆಸರು.

ಆಗಾಮಿವರ್ತಮಾನಾಹರ್ಯುಕ್ತಾಯಾಂನಿಶಿ ಪಕ್ಷಿಣೀ ॥

ಪಕ್ಷಿಣೀ- ಸ್ತ್ರೀ-೧-ಆಗಾಮಿವರ್ತಮಾನಾಹರ್ಯುಕ್ತಾಯಾಂ- ಬರುವ ಹಗಲಿನೊಂದಿಗೂ ಈಗಿನ ಹಗಲಿನೊಂದಿಗೂ ಕೂಡಿದ. ನಿಶಿ-ರಾತ್ರಿಯಲ್ಲಿ ವರ್ತಿಸುವದು. ಅಂದರೆ, ಈಗಿನಹಗಲು. ಈದಿನರಾತ್ರಿ. ನಾಳೆಹಗಲು ಅಂತೂ ಎರಡುಹಗಲುಗಳ ೨-ಹಗಲುಗಳ ಮಧ್ಯೆಇರುವ ರಾತ್ರಿಗೆ ಪಕ್ಷಿಣಿಯೆಂದು.

ಗಣರಾತ್ರಂನಿಶಾಬಹ್ವ್ಯಃ

ಗಣರಾತ್ರಂ-೧-ಬಹ್ವ್ಯಃ= ನಿಶಾಃ-ಅನೇಕ ರಾತ್ರಿಗಳಿಗೆ ಹೆಸರುಗಳು.

ಪ್ರದೋಷೋರಜನೀಮುಖಂ।

ಪ್ರದೋಷಃ-ಪು-ರಜನೀಮುಖಂ-ನ-೨-ಪ್ರದೋಷಕಾಲದ ಹೆಸರುಗಳು.

ಅರ್ಧರಾತ್ರನಿಶೀಥೌದ್ವೌ

ಅರ್ಧರಾತ್ರಃ_ನಿಶೀಥಃ-ಪು-೨_ ಅರ್ಧ

CC-0. Jangamwadi Math Collection. Digitized by eGangotri

ದ್ಯೌ ಯಾಮಪ್ರಹರೌ ಸಮೌ

ಸ ಪರ್ವಸಂಧಿಃ ಪ್ರತಿಪತ್ಪಂಚದಶ್ಯೋರ್ಯದಂತರಂ ॥

ಪಕ್ಷಾಂತೌ ಪಂಚದಶ್ಯೌ ದ್ವೇ

ಪೌರ್ಣಮಾಸೀತುಪೂರ್ಣಿಮಾ ಕಲಾಹೀನೇಸಾ ನುಮತಿ ಪೂರ್ಣೇ ರಾಕಾ ನಿಶಾಕರೇ.

ರಾತ್ರಿಯ ಹೆಸರು ಅಂದರೆ, ರಾತ್ರಿಯು ಮಧ್ಯಭಾಗದ ಸರಿಹೊತ್ತು.

ಯಾಮಃ=ಪ್ರಹರಃ- ಪು-೨-ಜಾವದಹೆಸರುಗಳು. ಅಂದರೆ ಅಹೋರಾತ್ರದ ೬೦ ಘಳಿಗೆಗಳ ೪ನೇ ಭಾಗವಾದ ೭½ಘಳಿಗೆಯುಳ್ಳ ಝಾವ ಹೊತ್ತು

ಪರ್ವಸಂಧಿಃ-ಪು-ಏಕ-ಪರ್ವ-ಪಡಿ-ಸ-೧- ಪ್ರತಿಪತ್ಪಂಚದಶ್ಯೋಃ ಪಾಡ್ಯಮಿ ಹುಣ್ಣಿಮೆಗಳಿಗೂ, ಅಮಾವಾಸ್ಯೆ ಪಾಡ್ಯಗಳಿಗೂಯುದಂತರಂ ಯಾವದು ಮಧ್ಯ ಕಾಲವೋ ಅದರ ಹೆಸರು. ಅಂದರೆ, ಜ್ಯೋತಿಶ್ಶಾಸ್ತ್ರರೀತ್ಯಾ ಅಮಾವಾಸ್ಯೆ ಕೊನೆಯಲ್ಲಿ ೨ ಶುಕ್ಲಪಾಡ್ಯದ ಮೊದಲಿನಲ್ಲಿ ೨ ಅಂತು ನಾಲ್ಕು ಘಳಿಗೆ, ಹುಣ್ಣಿಮೆ ಕೊನೆ ೩ ಕೃಷ್ಣಪಾಡ್ಯದ ಆದಿಯಲ್ಲಿ ೩ ಅಂತೂ ೬ ಘಳಿಗೆ. ಇದೇ ಪರ್ವಸಂದಿ ಧರ್ಮಶಾಸ್ತ್ರರೀತ್ಯಾ ಅಮಾಪೂರ್ಣಿಮಾ ಪರ್ವಗಳ ಘಳಿಗೆಗಳಿಗಿಂತಲೂ ನ್ಯೂನಾಧಿಕವಾಗಿದ್ದ ಪಾಡ್ಯದ ಪರಿಸು ಘಟ್ಟಿಗಳು ಹೋದದ್ದು ಹೋದಷ್ಟುಗಳಿಗೆ ಕಳದುದಷ್ಟು ಪಾಡ್ಯವಾದ ಘಳಿಗೆಗಳೇ ಪರ್ವಸಂಧಿ.

ಪಕ್ಷಾಂತೌ -ಪು- ಪಂಚದಶ್ಯೌ-ಈ-ಸ್ತ್ರೀದ್ವಿ-೧-ಅಮಾವಾಸ್ಯೆ ಹುಣ್ಣಿಮೆಗಳ ಹೆಸರುಗಳು.

ಪೌರ್ಣಮಾಸೀ-ಪೂರ್ಣಿಮಾ-ಸ್ತ್ರೀ=೨-ಹುಣ್ಣಿಮೆ ಹೆಸರುಗಳು. ಸಿಶಾಕರಚಂದ್ರನು- ಕಳಾಹೀನೇಸತಿ-ಒಂದು ಕತ್ತೆ

CC-0. Jangamwadi Math Collection. Digitized by eGangotri

ಯು ಕಡಮೆಯಾಗು ತಿರುವಲ್ಲಿ ಸಾ-
ಹುಣ್ಣಿಮೆ=ಅನುಮತಿಃ=ಸ್ತ್ರೀ=೧=
ನುಮತಿ ಯೆನ್ನಲ್ಪಡುವದು ಅಂದರೆ ಚ
ದ್ರೋದಯ ಕಾಲಕ್ಕೆ ಚತುರ್ದಶಿಯಾ
ರುಪಾತ್ಮಕವಾದರೂ ಇದ್ದು ಅಚರಿಸ
ಡುವ ಹುಣ್ಣಿಮೆಯೇ ಅನುಮತಿ-
ಣ=ಸತಿ=ಚಂದ್ರನು ಷೋಡಶ ಕಲೆಗ
ತುಂಬಿದವನಾದಲ್ಲಿ ರಾಕಾ=೧=ಸ್ತ್ರೀ=
ಹುಣ್ಣಿಮೆ ರಾಕೆಯನ್ನಲ್ಪಡುವದು.

ಅಮಾವಾಸ್ಯಾ ತ್ವಮಾವಾಸ್ಯಾದ್ದರ್ಶಃ ಸೂರ್ಯೇಂದುಸಂಗಮಃ । ಸಾದೃಷ್ಟೇಂದುಸ್ಸಿನೀವಾಲೀ ಸಾನಷ್ಟೇಂದುಕಲಾಕುಹೂಃ ॥೧೧೬॥

ಅಮಾವಾಸ್ಯಾ=ಅಮಾ=ವಾ=ಸ್ಯಾ
=ಸ್ತ್ರೀ ದರ್ಶಃ=ಸೂರ್ಯೇಂದುಸಂಗಮ
ಪು=೪=ಅಮಾವಾಸ್ಯೆಹೆಸರುಗಳು. ಸಿ
ವಾಲೀ=ಸ್ತ್ರೀ=೧= ದೃಷ್ಟೇಂದುಃ
ಚಂದ್ರಕಳೆಕಾಣಿಸಿದ =ಸಾ= ಅಂಥಾ
ಮಾವಾಸ್ಯೆಯ ಹೆಸರು.
ಸಾಯಂಕಾಲಕ್ಕೆ ಚತುರ್ದಶಿ ಯಾಗ
ಬಾಧ್ಯವಾಗಲೀ ಇರುವ ಅಮಾವಾಸ್ಯೆ
ಸಿನೀವಾಲಿಯೆಂದು ಹೆಸರು. ನಷ್ಟೇಂದು
ಲಾ ಕಾಣಿಸಲ್ಪಡದೇಯಿರುವ ಚಂದ್ರ
ಯುಳ್ಳ =ಸಾ= ಅಂತಾಅಮಾವಾಸ್ಯೆ
ಕುಹೂಯೆಂದು ಹೆಸರು. ಕುಹೂ
೧=ಊ=ಸ್ತ್ರೀ.

ಉಪರಾಗೋಗ್ರಹೋ ರಾಹುಗ್ರಸ್ತೇತ್ವಿಂದೌಚ ಪೂಷ್ಣಿಚ

ಉಪರಾಗಃ=ಗ್ರಹಃ=ಪು=೨=ಗ್ರ
ದಹೆಸರು ಗ್ರಹಣವಂದರೆಸೂರ್ಯ ಚಂ
ಬಿಂಬಗಳಲ್ಲಿ ಭೂಮಿಯ ನೆರಳಾದ ರಾ
ಕೇತುಗಳೆಂಬ ತಮೋ ಮಂಡಲದ ಸ
ಬಿಂಕವುತೋರುವಿಕೆ ಅಥವ ಕಪ
ಬೇರೆಬಣ್ಣತೋರುವಿಕೆ.

CC-0. Jangamwadi Math Collection. Digitized by eGangotri

ಸೋಪಪ್ಲವೋಪರಕ್ತೌ ದ್ವೌ	ಸೋಪಪ್ಲವಃ= ಉಪರಕ್ತಃ=ಪು೨= ರಾಹುಗ್ರಸ್ತರಾಹುವಿನಿಂದ ಗ್ರಹಿಸಲ್ಪಟ್ಟ ಇಂದೌ=ಚಂದ್ರನಲ್ಲಿಯೂ ಪೂಷ್ಣಿ=ಸೂರ್ಯನಲ್ಲಿಯೂ, ವರ್ತಿಸುವದು.
ವಗ್ನ್ಯುತ್ಪಾತಉಪಾಹಿತಃ॥	ಅಗ್ನ್ಯುತ್ಪಾತಃ=ಉಪಾಹಿತಃ=೨-ಧೂಮಕೇತುವಿನ ಹೆಸರುಗಳು.
ಏಕಯೋಕ್ತ್ಯಾ ಪುಷ್ಪವಂತೌದಿವಾಕರನಿಶಾಕರೌ ।	ಪುಷ್ಪವಂತೌ =ತ್=ಪು=ಪುಷ್ಪದಂತೌ ಅ= ದ್ವಿ=ಪು=೧=ಏಕಯೋಕ್ತ್ಯಾ=ಒಂದು ಮಾತಿನಿಂದೆಲೆ ದಿವಾಕರನಿಶಾಕರೌ= ಸೂರ್ಯಚಂದ್ರರಹೆಸರು.
ಅಷ್ಟಾದಶನಿಮೇಷಾಸ್ತು ಕಾಷ್ಠಾ	ಕಾಷ್ಠಾ=ಸ್ತ್ರೀ=೧=ಅಷ್ಟಾದಶನಿಮೇಷಾಃ=ಹದನೆಂಟುಸಾರಿ ರೆಪ್ಪೆಆಡಿಸುವಷ್ಟು ಹೊತ್ತಿನಹೆಸರು.
ತ್ರಿಂಶತ್ತುತಾಃಕಲಾ॥	ಕಲಾ=ಸ್ತ್ರೀ=೧= ತಾಃ=ತ್ರಿಂಶತ್= ಅಂಥಾಕಾಷ್ಠೆಗಳುಮೂವತ್ತಾಗುವಷ್ಟು ಹೊತ್ತಿನ ಹೆಸರು.
ತಾಸ್ತುತ್ರಿಂಶತ್ಕ್ಷಣ	ಕ್ಷಣಃ=ಪು=೧=ತಾಃತ್ರಿಂಶತ್=ಅಂಥಾ ಕಲೆಗಳುಮೂವತ್ತಾಗುವಷ್ಟುಹೊತ್ತಿನ ಹೆಸರು,
ಸ್ತೇತು ಮುಹೂರ್ತೋ ದ್ವಾದಶಾಸ್ತ್ರಿಯಾಂ	ಮುಹೂರ್ತಃ=ಪು=೧=ತೇದ್ವಾದಶ=ಅಂಥಾಕ್ಷಣಗಳುಹನ್ನೆರಡಾಗುವಷ್ಟುಹೊತ್ತಿನಹೆಸರು.
ತೇತುತ್ರಿಂಶದಹೋರಾತ್ರಃ	ಅಹೋರಾತ್ರಃ=ಪು=೧= ತೇ=ತ್ರಿಂಶತ್ ಅಂಥಾಮುಹೂರ್ತಗಳು ಮೂವತ್ತಾಗುವಷ್ಟುಹೊತ್ತಿನಹೆಸರು.
ಪಕ್ಷಸ್ತೇದಶಪಂಚಚ॥೧೯॥	ಪಕ್ಷಃ=ಪು-೧=ತೇ=ಅಂಥಾ ಅಹೋರಾತ್ರಗಳು=ದಶಪಂಚ-ಹದಿನೈದಾಗುವಷ್ಟು ಕಾಲದಹೆಸರು.

CC-0. Jangamwadi Math Collection. Digitized by eGangotri

ಪಕ್ಷೌಪೂರ್ವಾಪರೌಶು ಕ್ಲಕೃಷ್ಣೌ

ಶುಕ್ಲಃ=ಪು=೧-ಕೃಷ್ಣಃ-೧-ಪೂ: ಪರೌ-ಕ್ರಮದಿಂದ= ಪೂರ್ವಪಕ್ಷಕ್ಕೂ ಅಪರಪಕ್ಷಕ್ಕೂ ಹೆಸರುಗಳು.

ಮಾಸಸ್ತೌತಾವುಭೌ ।

ಮಾಸಃ=ಪು-ತೌ-ಉಭೌ । ಅ... ಕೃಷ್ಣಪಕ್ಷಗಳೆರಡೂ ಕೂಡಿದ ಒಂದು... ಗಳಹೆಸರು.

ದ್ವೌದ್ವೌ ಮಾಘಾದಿ ಮಾ ಸೌಸ್ಯಾದೃತು

ಋತುಃ-ಪು-೧-ಮಾಘಾದಿ-ಮಾಘ... ಸಮೊದಲುಗೊಂಡು- ದ್ವೌದ್ವೌಮಾ... ಸ್ಯಾತ್=ಎರಡೆರಡುತಿಂಗಳು ಕೂಡಿದ... ಲಕ್ಕೆಹೆಸರು.

ಸ್ತ್ರೈರಯನಂ ತ್ರಿಭಿಃ

ಅಯನಂ-ನ-೧-ತ್ರೈಃ-ತ್ರಿಭಿಃ-ಅಂ... ಋತುಗಳು ಮೂರುಕೂಡಿದಕಾಲಕ್ಕೆ ಹೆ... ಸರು.

ಅಯನೆದ್ವೇ ಗತಿರುದದ್ದಕ್ಷಿ ಣಾರ್ಕಸ್ಯವತ್ಸರಃ ।

ವತ್ಸರಃ-ಪು-೧-ಅರ್ಕಸ್ಯ-ಸೂರ್ಯನ... ಉದಗ್ಗತಿಃ- ಉತ್ತರಾಯಣ- ದಕ್ಷಿಣಾ... ತಿಃ-ದಕ್ಷಿಣಾಯನವೆಂಬದ್ವೇಅಯನೆ- ... ಡು ಅಯನಗಳೂ ಕೂಡಿದಕಾಲಕ್ಕೆ ... ಸರು ಅಂದರೆ। ಸೂರ್ಯನು ೬ ತಿಂಗ... ಬಡಕಲಿಗೂ ೬ ತಿಂಗಳು ಟೆಂಕಲಿಗೂ ... ಯನಿಸುವನಾಗಿ ಈ ೧೨ ತಿಂಗಳಿಗೂ ... ದು ವರುಷವಾಗುವದು.

ಸಮರಾತ್ರಿಂದಿವೆಕಾಲೆ ವಿ ಷುವದ್ವಿಷುವಂಚತತ್ ॥

ವಿಷುವತ್-ವಿಷುವಂ-ಸ-೨-ಸಮರಾ... ತ್ರಿಂದಿವೆ- ಸಮವಾದ ರಾತ್ರಿ ಹಗಲು... ಳ್ಳ ಕಾಲೆ- ಸಮಯದಲ್ಲಿವರ್ತಿಸುವದು ... ಅಂದರೆತುಲಾ ಮೇಷ ಸಂಕ್ರಮಣ... ಕಾಲವೆನ್ನುವಿಕೆ.

ಪುಷ್ಯಯುಕ್ತಾ ಪೌರ್ಣ ಮಾಸೀಪೌಷೀ

ಪೌಷೀ-ಸ್ತ್ರೀ-೧-ಪುಷ್ಯಯುಕ್ತಾ ಪುಷ್ಯನಕ್ಷತ್ರ-ಧೊಡಗೂಡಿದ= ಪೌರ್ಣ...

CC-0. Jangamwadi Math Collection. Digitized by eGangotri

(ಮಾಸೆತುಯುತ ್ರಸಾ- ।
ಾವನ್ನಾ ಸ) ಪೌಷೊಮಾಘಾ
್ಯಾಖ್ಯೈವಮೆಕಾದಶಾಪರೆ ॥

